MOTION TO PASS

SRI J.H. PATEL.—Sir, I beg to move that

"The Karnataka Electricity (Taxation on Consumption) (Amendment) Bill, 1983 be passed"

MR. DEPUTY SPEAKER.—The question is:

"That the Karnataka Electricity(Taxation on Consumption) (Amendment) Bill, 1983 be passed."

The motion was adopted and the Bill was passed

PRIVATE MEMBERS RESOLUTIONS

Reg: Establishment of Steel Plant at Vijayanagar

† ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ ಕಳೆದ ಅಧಿವೇಶನದಲ್ಲಿಯೇ ನಾನು ಈ ಒಂದು ನಿರ್ಣಯವನ್ನು ಪ್ರಸ್ತಾಪ ಮಾಡಿದ್ದೆ. ಅದು ಏನೆಂದರೆ ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ವಿಜಯನಗರದಲ್ಲಿ ಸ್ಥಾಪನೆ ಮಾಡುವ ಬಗ್ಗೆ ಈ ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ನಾವು ಕೇಂದ್ರ ಸರ್ಕಾರದ ಮೇಲೆ ಆಗಾಗ್ಗೆ ಒತ್ತಡಗಳನ್ನು ತರುತ್ತಿದ್ದೇವೆ. ಈ ಒಂದು ನಿರ್ಣಯದ ಬಗ್ಗೆ ಹಲವಾರು ಕಡೆಗಳಲ್ಲಿ ಘಟನೆಗಳು ನಡೆದಿವೆ. ಇಡೀ ರಾಷ್ಟ್ರದಲ್ಲಿ ಈ ಬಗ್ಗೆ ವಾದವಿವಾದಗಳು ಹಬ್ಬಿದ್ದವು. ಆದರೂ ಕೂಡ ವಿಜಯನಗರದ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾತ್ರ ಆಗಲಿಲ್ಲ.

(ಶ್ರೀ ಡಿ.ಬಿ. ಚಂದ್ರೇಗೌಡರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಮಂತ್ರಿಗಳು ಮತ್ತು ರಾಜ್ಯ ಸರ್ಕಾರದ ಮಂತ್ರಿಗಳು ಪರಸ್ಪರ ಮಾತುಕತೆಯನ್ನು ಕೂಡ ಮಾಡಿದ್ದಾರೆ. ರಾಜ್ಯದಲ್ಲಿ ನಾನಾಕಡೆಗಳಲ್ಲಿ ಚಳುವಳಿಗಳು ಕೂಡ ನಡೆದಿವೆ. ಮತ್ತು ಕರ್ನಾಟಕ ರಾಜ್ಯದ ಜನರಲ್ಲಿ ಒಂದು ಗಲಿಬಿಲಿಯಾದಂಥ ವಾತಾವರಣ ಉಂಟಾಗಿದೆ ಸುಮಾರು ೧೨ ವರ್ಷಗಳಿಂದ ಅಂದರೆ ೧೯೭೧ನೇ ಇಸವಿಯಲ್ಲಿ ಈ ವಿಜಯನಗರದ ಉಕ್ಕಿನ ಕಾರ್ಖಾನೆ ಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಧಾನಿಯವರು ಅಸ್ತಿಭಾರವನ್ನು ಹಾಕಿದರು. ಆವರು ಯಾವ ಗಳಿಗೆಯಲ್ಲಿ ಈ ಕಾರ್ಖಾನೆಗೆ ಅಸ್ತಿಭಾರವನ್ನು ಹಾಕಿದರೋ ಇದುವರೆಗೂ ಕೂಡ ಆ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಲು ಕಾಲಾವಕಾಶ ಕೂಡಿ ಬರಲಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ಗಳಿಗೆ ಮತ್ತು ಶಾಸ್ತ್ರಗಳನ್ನು ಹೇಳಿಕೊಡುವವರು ತಮ್ಮಂಥವರೇ. ಅವರೇನು ಗಳಿಗೆ ಮತ್ತು ಕಾಲ ನೋಡಿಕೊಂಡು ಬರುವುದಿಲ್ಲ.

ಅಧ್ಯಕ್ಷರು.—ನಾಳೆಯಿಂದ ನಿಮ್ಮನ್ನು ಕೇಳೋಣ ಬಿಡಿ.

ಶ್ರೀ ಗೋವಿಂದ ಪಿ.ಒಡೆಯರಾಜ್.—ಸ್ವಾಮಿ, ಗಳಿಗೆ ಮತ್ತು ಕಾಲ ಹೇಳುವುದು ನಮ್ಮಂತವರಿಗೆ ಬರುವುದಿಲ್ಲ.

ಶ್ರೀ ಪಿ. ರಾಂದೇವ್.—ತಾವು ನಮ್ಮ ಪಕ್ಷದಲ್ಲಿದ್ದಾಗ ವಿಜಯನಗರದ ಉಕ್ಕಿನ ಕಾರ್ಖಾನೆಗೆ ಅಸ್ತಿಭಾರವನ್ನು ಹಾಕಿದ್ದು ಇರಬೇಕು. ಆದರೆ ತಾವು ಈಗ ಪಕ್ಷಾಂತರ ಮಾಡಿದ್ದೀರಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ನಾನು ಮೊದಲಿನಿಂದಲೂ ಸಂಸ್ಥಾ ಕಾಂಗ್ರೆಸ್ ನಲ್ಲಿಯೇ ಇದ್ದೇನೆ. ನಾವು ಆ ಸಂಸ್ಥೆಯನ್ನು ಸ್ಥಾಪನೆ ಮಾಡಿ ಬೆಳೆಸಿದ್ದೇವೆ.

---

†ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಧ್ಯಕ್ಷರು.—ಆ ವಿಷಯವನ್ನು ಅಲ್ಲಿಗೆ ಬಿಡಿ. ತಾವು ಈಗ ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಷಯಕ್ಕೆ ಬಂದರೆ ಒಳ್ಳೆಯದು.

ಶ್ರೀ ಪಿ. ರಾಂದೇವ್.—ಸ್ವಾಮಿ, ವಿಜಯನಗರದ ಉಕ್ಕಿನ ಕಾರ್ಖಾನೆಯ ಹೆಸರನ್ನು ಎತ್ತಿದರೆ ಸಾಕು ಮಾನ್ಯ ಸದಸ್ಯರಿಗೆ ಒಂದು ತರಹ ಆಗುತ್ತದೆ. ಮಾನ್ಯ ಪ್ರಧಾನಿಯವರು ಯಾವ ಗಳಿಗೆಯಲ್ಲಿ ಆ ವಿಜಯನಗರದ ಉಕ್ಕಿನ ಕಾರ್ಖಾನೆಗೆ ಅಸ್ತಿಭಾರವನ್ನು ಹಾಕಿದರೋ ಅಲ್ಲಿಂದ ಇಲ್ಲಿಯವರೆಗೂ ಕೂಡ ಅಪಜಯವಾಗುತ್ತಿದೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ, ಪ್ರಧಾನಿಯವರು ತಮ್ಮ ಜಿಲ್ಲೆಯಲ್ಲಿಯೂ ಕೂಡ ಇಂಥ ಒಂದು ಅಸ್ತಿಭಾರವನ್ನು ಹಾಕಿದ್ದಾರೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ಈ ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ಅನೇಕ ವಿಚಾರಗಳು ಬಂದಿವೆ. ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಅಂದರೆ ಇಲ್ಲಿ ಉಕ್ಕಿನ ಒಂದು ಸ್ಥಾವರವನ್ನೇ ಸ್ಥಾಪನೆ ಮಾಡಬೇಕೆಂದು ಹೇಳುವಾಗ ಅನೇಕ ಕಡೆಗಳಿಂದ ಅನೇಕ ರೀತಿಯ ಹೇಳಿಕೆಗಳು ಬಂದಿವೆ. ಅಂದರೆ ೧೯೭೧ ರಿಂದ ಹಿಡಿದು ೧೯೮೨ರ ವರೆಗೆ ಅನೇಕ ಹೇಳಿಕೆಗಳು ಬಂದಿವೆ. ಮತ್ತೆ ೧೯೮೩ರಲ್ಲಿ ಕೂಡ ಅನೇಕ ಹೇಳಿಕೆಗಳು ಬಂದಿವೆ. ಇವೆಲ್ಲವನ್ನೂ ನೋಡಿದರೆ ನನಗನಿಸುತ್ತವೆ, ಹಿಂದೆ ಅಧಿಕಾರದಲ್ಲಿದ್ದಂತಹ ಸರ್ಕಾರಗಳು, ಆ ಸರ್ಕಾರದ ನಾಯಕರು, ಲೋಕಸಭಾ ಸದಸ್ಯರು, ಕೇಂದ್ರ ಸರ್ಕಾರದ ಮಂತ್ರಿಗಳು ಮತ್ತು ರಾಜ್ಯ ಸರ್ಕಾರದ ಮಂತ್ರಿಗಳು ಹೇಳಿಕೆಗಳನ್ನು ಕೊಟ್ಟು ಕರ್ನಾಟಕ ರಾಜ್ಯದ ಜನತೆಗೆ ಮೋಸ ಮಾಡಿದ್ದಾರೆ, ಎಂದು ನಾನು ಈ ಸಂದರ್ಭದಲ್ಲಿ ಹೇಳಿದರೂ ಕೂಡ ಅದು ತಪ್ಪಾಗುವುದಿಲ್ಲ. ಕಾರಣವೇನೆಂದರೆ ಅವರು ಕೊಟ್ಟಿರತಕ್ಕಂಥ ಹೇಳಿಕೆಯನ್ನು ತಾವು ನೋಡಿದರೆ ತಮಗೆ ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಕೇಂದ್ರದ ಮಂತ್ರಿಗಳಾದಂಥ ಶ್ರೀಮಾನ್ ಸಾಳ್ವೆಯವರ ಜೊತೆಯಲ್ಲಿ ಮಾತನಾಡಿದಾಗ ಈ ಮಾತನ್ನು ಸಾಳ್ವೆಯವರು ಹೇಳಿದ್ದಾರೆ. What he told about the Vijayanagar Steel Plant, is not discouraging but it is enscouraging. ಮತ್ತೆ ನಮ್ಮ ಪ್ರದೇಶ ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷರಾದ ಶ್ರೀಮಾನ್ ಕೆ.ಹೆಚ್. ಪಾಟೀಲ್‌ರವರು ೨೪-೧೨-೮೩ರಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತು ವಿರೋಧಪಕ್ಷದ ನಾಯಕರು ಸಹ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಈ ರೀತಿ ಇದೆ. "Moily to take up the issue with the Centre" ಮತ್ತೆ ಶ್ರೀಮತಿ ಇಂದಿರಾ ಗಾಂಧಿಯವರು ಹೇಳಿದ್ದಾರೆ, ನಾವು ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕಾದರೆ ಇಲ್ಲಿ ಸರಿಯಾದಂಥ ವಿದ್ಯುಚ್ಛಕ್ತಿ ಮತ್ತು ರಿಸೋರ್ಸ್ ಇಲ್ಲವೆಂದು, ಅವರು ಆ ರೀತಿಯ ಮಾತನ್ನು ಏತಕ್ಕೆ ಹೇಳಿದ್ದಾರೆಂದರೆ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಜನತಾ ಸರ್ಕಾರ. ಅಂದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಮಾತನ್ನು ಹೇಳಿದರು. ಇದರಿಂದ ನಮಗೆ ಏನು ಗೊತ್ತಾಗುತ್ತದೆ ಎಂದರೆ ಕರ್ನಾಟಕ ರಾಜ್ಯದ ಜನತೆಗೆ ಇವರು ನಂಬಿಸಿ ನಂಬಿಸಿ ನಂಬಿಕೆಯ ದ್ರೋಹವನ್ನು ಮಾಡಿದ್ದಾರೆ. ಇದು ಸುಮಾರು ನಾಲ್ಕು ಕೋಟಿ ಕನ್ನಡದ ಜನತೆಗೆ ಮಾಡಿರತಕ್ಕಂಥ ಅಪಮಾನವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ ಪ್ರಧಾನಿಯವರು ಈ ಬಗ್ಗೆ ಇದುವರೆಗೂ ಯಾವುದೇ ರೀತಿಯ ಪ್ರೋಗ್ರೆಸ್ ಮಾತನ್ನು ಸಹ ಹೇಳಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ತಾವು ಪದೇ ಪದೇ ಈ ಮಾತನ್ನು ಹೇಳುತ್ತಿದ್ದರೆ ಇದು ಒಂದು ರೀತಿಯಲ್ಲಿ ಪ್ರಚೋದನೆಯಾಗುತ್ತದೆ. ಆನಂತರ ತಾವೇ ಈ ಬಗ್ಗೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಆದ್ದರಿಂದ ತಾವು ಈ ಮಾತನ್ನು ಹೇಳುವ ಮುನ್ನ ನಿಮ್ಮ ಮುಖ್ಯಮಂತ್ರಿಗಳನ್ನು ಒಂದು ಮಾತು ಕೇಳಿ ಮಾತನಾಡಿದರೆ ಒಳ್ಳೆಯದು.

ಶ್ರೀ ಬಿ.ಆರ್. ಲಕ್ಷ್ಮಯ್ಯ.—ಸ್ವಾಮಿ, ಮಾನ್ಯ ರಾಂದೇವ್‌ರವರು ಹೇಳುತ್ತಿರುವುದು ನಿಜವಾದ ಸಂಗತಿಯಾಗಿದೆ. ಆದ್ದರಿಂದ ಅವರು ಪಶ್ಚಾತ್ತಾಪ ಪಡಬೇಕಾಗಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ಮಾನ್ಯ ಸದಸ್ಯರು ಬಹಳ ಜವಾಬ್ದಾರಿಯುತ ಸ್ಥಾನದಲ್ಲಿದ್ದುಕೊಂಡು ಮಾತನಾಡುತ್ತಿದ್ದಾರೆ. ಆದ್ದರಿಂದಲೇ ಅವರು ಅವರ ಮುಖ್ಯಮಂತ್ರಿಗಳನ್ನು ಒಂದು ಮಾತು ಕೇಳಿ ಮಾತನಾಡಿದರೆ ಒಳ್ಳೆಯದೆಂದು ನಾನು ಹೇಳಿದ್ದು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ವಿಜಯನಗರದ ಉಕ್ಕಿನ ಕಾರ್ಖಾನೆ ಇನ್ನೂ ಸ್ಥಾಪನೆಯಾಗಿಲ್ಲ. ಆದ್ದರಿಂದ ಅವರು ಪಶ್ಚಾತ್ತಾಪ ಪಡುತ್ತಿದ್ದಾರೆ.

ಶ್ರೀ ಪಿ. ರಾಮದೇವ್.—ನಾನು ಪಶ್ಚಾತ್ತಾಪ ಪಡಬೇಕೆಂದು ನಮ್ಮ ಗೆಳೆಯರಾದ ಮಾನ್ಯ ಒಡೆಯರಾಜ್‌ರವರು ಹೇಳಿದರು. ಈಗ ನಾನು ಅವರ ಬಗ್ಗೆ ನಿಜವಾಗಲೂ ಪಶ್ಚಾತ್ತಾಪ ಪಡಬೇಕಾಗಿದೆ. ಏಕೆಂದರೆ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಮಾನ್ಯ ಒಡೆಯರಾಜ್‌ರವರು ನಮ್ಮ ಪಕ್ಷದಲ್ಲಿ ಇದ್ದರು. ನಾನು ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಪ್ರಸ್ತಾಪ ಮಾಡಿದಾಗ ಆಗ ಗುಂಡೂರಾಯರು ಒಂದು ಮಾತು ಹೇಳಿದರು. ''ಇವತ್ತು ನಮ್ಮ ರಾಜ್ಯ ಸರ್ಕಾರ ಶ್ರೀಮತಿ ಇಂದಿರಾಗಾಂಧಿಯವರಿಗೆ ಬಹಳ ಹತ್ತಿರವಾಗಿದೆ, ಇಷ್ಟೊಂದು ಹತ್ತಿರ ಹಿಂದೆಂದೂ ಇರಲಿಲ್ಲ. ನಾನು ಅವರ ಕಿಚನ್‌ವರೆಗೂ ಹೋಗಬಲ್ಲೆ. ನಾನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಇರುವುದರಿಂದ, ಎಲ್ಲಾ ರಾಜ್ಯದ ಮುಖ್ಯ ಮಂತ್ರಿಗಳು ನನ್ನ ಹತ್ತಿರ ಬರಬೇಕು. ಇಷ್ಟೊಂದು ಹತ್ತಿರ ಇರುವಾಗ ರಾಜ್ಯದ ಸಮಸ್ಯೆಗಳು ಪರಿಹಾರವಾಗುತ್ತವೆ. ನಾವು ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡೇ ಮಾಡುತ್ತೇವೆ'' ಎಂದು ಹೇಳಿದರು. ಈಗ ಯಾರು ಪಶ್ಚಾತ್ತಾಪ ಪಡಬೇಕು? ನಿಮಗೆ ನಾಚಿಕೆಯಾಗುವುದಿಲ್ಲವೆ? ನೀವು ನಾಳೆಯೇ ರಾಜೀನಾಮೆಯನ್ನು ಕೊಡಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಇದೇ ಸದನದಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಗೆ ೩೦ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿದ್ದಾರೆಂದು ಹಿಂದಿನ ಮುಖ್ಯ ಮಂತ್ರಿಗಳು ಹೇಳಿದ್ದರು. ೧,೨೦೦ ಕೋಟಿ ರೂಪಾಯಿ ಅಂದಾಜು ವೆಚ್ಚವಿರುವ ಯೋಜನೆಗೆ ೩೦ ಕೋಟಿ ರೂಪಾಯಿ ಸಾಲುವುದಿಲ್ಲವೆಂದು ರಿಜೆಕ್ಟ್ ಮಾಡಿದ್ದೇವೆಂದು ಹೇಳಿರತಕ್ಕ ಉದಾಹರಣೆಗಳು ಇವೆ. ಕೊನೆಗೆ ಅದು ಇಲ್ಲ, ಇದು ಇಲ್ಲ. ಯಾವುದೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಮಾತನಾಡುವಾಗ ಪಕ್ಷಾತೀತವಾಗಿ ಮಾತನಾಡಬೇಕು. ವಿಜಯನಗರ ಉಕ್ಕಿನ ಕಾರ್ಖಾನೆ ನಮ್ಮ ರಾಜ್ಯಕ್ಕೆ ಬೇಕು. ಇದು ಪಕ್ಷಾತೀತವಾದ ಪ್ರಶ್ನೆ, ಇಡೀ ರಾಜ್ಯದ ಒಂದು ಜೀವಾಳದ ಪ್ರಶ್ನೆ. ನಾನು ಆ ಕಡೆಯ ಸದಸ್ಯರಲ್ಲಿ ಮತ್ತು ಈ ಕಡೆಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ನಾವೆಲ್ಲರೂ ಈ ವಿಷಯದ ಬಗ್ಗೆ ಪಕ್ಷಾತೀತವಾಗಿ ಮಾತನಾಡೋಣ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಮಂತ್ರಿಗಳು ಏನು ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದೀರಿ ಅದು ಬಹಳ ಒಳ್ಳೆಯದು, ಅದೇ ರೀತಿ ನಿಮ್ಮ ಪಕ್ಷದ ಸದಸ್ಯರಿಗೆ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ತರಲಿಕ್ಕೆ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಹೇಳಿ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ರಾಜಕೀಯ ಮಾಡುವುದು ಬೇಡ.

ಶ್ರೀ ಎಸ್.ಆರ್. ಬೊಮ್ಮಾಯಿ.—ವಿಜಯನಗರ ಉಕ್ಕಿನ ಕಾರ್ಖಾನೆ ಅಡಿಗಲ್ಲು ಹಾಕಿ ೧೦ ವರ್ಷಗಳಾದರೂ ಇದುವರೆಗೆ ಪ್ರಾರಂಭವಾಗಿಲ್ಲ. ತಡವಾಗಿಯಾದರೂ ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ಮಾಡೋಣ.

ಶ್ರೀ ಪಿ. ರಾಮದೇವ್.—ನಾನು ಸರ್ಕಾರದ ನೀತಿಯನ್ನು ಪ್ರತಿಪಾದನೆ ಮಾಡುತ್ತಿಲ್ಲ. ನಾನು ಶಾಸನಸಭೆಯ ಸದಸ್ಯನಾಗಿ ಕನ್ನಡನಾಡಿನ ಜನತೆಯ ಆಶೋತ್ತರಗಳು ಏನಿವೆ ಅವುಗಳ ಬಗ್ಗೆ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಕೈಗಾರಿಕಾ ಮಂತ್ರಿಗಳಾದ ಬೊಮ್ಮಾಯಿ ಯವರಲ್ಲಿ ನಮ್ಮ ಮತ್ತು ತಮ್ಮಲ್ಲಿ ಭಿನ್ನಾಭಿಪ್ರಾಯಗಳು ಇವೆಯೆಂದು ಇದರಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಮಾನ್ಯ ಮಂತ್ರಿಗಳು ಇಡೀ ರಾಜ್ಯದ ಜೀವಾಳದ ಪ್ರಶ್ನೆ ಮಾತನಾಡುವಾಗ ವಿಜಯನಗರ ಉಕ್ಕಿನ ಕಾರ್ಖಾನೆ ಬರುವ ಹಾಗೆ ವಾತಾವರಣವನ್ನು ನಿರ್ಮಾಣ ಮಾಡಿ ಎನ್ನತಕ್ಕ ಮಾತನ್ನು ಹೇಳಿದ್ದಾರೆ.

ಶ್ರೀ ಪಿ. ರಾಮದೇವ್.—೧೨ ವರ್ಷಗಳಿಂದ ಕೇಂದ್ರ ಸರ್ಕಾರದ ಗುಲಾಮಗಿರಿಯನ್ನು ಮಾಡಿದ್ದರಿಂದ ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭವಾಗುವುದು ಹಾಳಾಗಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನೀವೊಬ್ಬರೇ ಕನ್ನಡಿಗರಲ್ಲ. ನಿಮಗೆ ಒಬ್ಬರಿಗೇ ಅಲ್ಲ ಗೊತ್ತಿರುವುದು ನಮಗೂ ಗೊತ್ತಿದೆ.

ಶ್ರೀ ಪಿ. ರಾಂದೇವ್.—ನಿಮಗೇನು ಗೊತ್ತಿದೆ ? ವಿಜಯನಗರ ಉಕ್ಕಿನ ಕಾರ್ಖಾನೆ ಬರತಕ್ಕ ದ್ದನ್ನು ತಪ್ಪಿಸತಕ್ಕಂತಹ ಕೆಲಸ ಮಾಡಿದ್ದೀರಿ. ನಿಮಗೆ ಮಾತನಾಡಲಿಕ್ಕೆ ಯಾವ ನೈತಿಕ ಹಕ್ಕೇ ಇಲ್ಲ.

(ಗೊಂದಲ)

ನಾಲ್ಕು ಕೋಟಿ ಕನ್ನಡಿಗರಿಗೆ ಯಾವ ತರಹ ಅನ್ಯಾಯ ಮಾಡಿದ್ದೀರಿ ಎನ್ನುತಕ್ಕ ಮಾತನ್ನು ನಾನು ಹೇಳಿಲ್ಲ. ನಿಮ್ಮ ಪಕ್ಷದವರೇ ಆದ ಕಾಂಗ್ರೆಸ್(ಐ) ಲೋಕಸಭಾ ಸದಸ್ಯರಾದ ಆರ್.ವೈ. ಘೋರ್ಪಡೆ ಯವರು ಹೇಳಿರತಕ್ಕ ಮಾತು ತಮ್ಮ ಪಕ್ಷದವರೇ ಆದ ಆರ್.ವೈ. ಘೋರ್ಪಡೆಯವರು ದಿನಾಂಕ ೨೮-೧೦-೮೩ರಂದು ನಿಮ್ಮ ಸರ್ಕಾರದ ಬಗ್ಗೆ ಯಾವ ರೀತಿಯ ಅಪಾದನೆ ಮಾಡಿದ್ದಾರೆಂಬುದನ್ನು ಹೇಳಿದ್ದೇನೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಭಾರತೀಯ ಜನತಾ ಪಕ್ಷದವರು ಮತ್ತು ಕಮ್ಯುನಿಸ್ಟ್ ಪಕ್ಷದವರು ಜನತಾ ಪಕ್ಷ ಏನೂ ಕೆಲಸ ಮಾಡಿಲ್ಲವೆಂದು ಹೇಳಿಲ್ಲವೇ ? ಅದೇ ರೀತಿ ಘೋರ್ಪಡೆ ಯವರು ಸಹ ಹೇಳಿದ್ದಾರೆ. ಇದಕ್ಕೆ ಏನು ಹೇಳುತ್ತೀರಿ ?

SRI. P. RAMADEV.—Even Congress(I) Member of Parliament, Mr. R.Y. Ghorpade has made a statement which has appeared in Deccan Hearld dated 27-10-1983. It reads thus :

> "Mr. R.Y. Ghorpade, Congress (I) M.P. from Bellary has characterised "irresponsible and false" statements like the one recently made by Opposition Leader in the Karnataka Assembly M. Veerappa Moily saying that a pig iron plant would be set up in Vijayanagar in place of the proposed integrated steel plant....."

He Characterised your leader as "irrisponsible and false."

Further, Mr. Ghorpade said: "even as late as in 1981, the Steel Authority of India had recommended to the Government the setting up of a steel plant at Vijayanagar with the coventional blast furnace technology. He observed that SAIL experts would surely have taken note of any other viable technology if it was available.

Mr. Ghorpade came down on the past State Governments in Karnataka, alleging that the case for a steel palant in Vijayanagar had gone by defauld because of the indifference of those who had the capacity and influence to bring about the timely establishment of the plant.

Describing the delay as man-made, he pointed out that not a single monitoring committee had been constituted by the State Government since 1971 to look after the work on the Vijayanagar plant. The issue was not debated in the State Assembly even for a single day during the last 12 yeats.

He expessed his dissatisfation over the manner in which the issue had been handled by the Janata and, later the Cong-

ress(I) Governments at the Centre. while Mr. George Fernandes as Central Minister gave preferance to a non-viable project like steel plant at Paradeep, Mr. Pranab Mukherji as the Steel Minister downgraded the Vijayanagar project within three months of the Congress(I) returning to power at the Centre.

He observed that Mr. Moily seemed to be only too anxious to become the spokesman for the Union Steel Ministry. If Mr. Moily "had the people's interest at heart, he would not have allowed himself to be used in this manner."

Mr. Ghorpade said the Centre must honour its commitment to build the plant."

3-30 P.M.

Now, I refer to Deccan Herald dated 18-10-1983- I quote

"The fate of the Vijayanagar Steel plant, hanging fire for the past 12 years, now hinges on the tests being conducted in West Germany about the suitability of the Hospet ore for steel making the German way. According to Opposition leader, Veerappa Moily this evening, blast furnace technology having been discarded as obsolete and expensive, the Government was trying out the West German method, proved to be much cheaper and efficient. Mr. Moily said the results of the tests would be available by mid-November and if all goes well, a 500,000 tonne pig iron plant would be put up at Vijayanagar which would be converted into a steel mill in due course."

I, now quote from Indian Express dated 18-10-1983 regarding Vijayanagar Steel plant:

"Opposition leader Mr. Veerappa Moily today accused Janata Government for sabotagin the Vijayanagar Steel Plant during the Janata rule at the Centre." Mr. Moily stated, "I do not want the Vijayanagar Steel Plant to be an illegitimate child of Mr. Hegde, political gimmicks."

I, further quote from Hindu dated 18-10-1983 as under;

"Giving this information to pressmen here today, the Congress (I) Opposition leader in the Karnataka Assembly, Mr. M. Veerappa Moily said it was the gist of his discussions with Mr. N. K. P. Salve, Union Minister for Steel, in New Delhi last week."

Then comes, Cycle Jatha, Indira indifferent etc., etc., ಕಳೆದ ಹನ್ನೆರಡು ವರ್ಷಗಳಿಂದ ನಾನಾ ರೀತಿಗಳಿಂದ ಪತ್ರಿಕೆಗಳಲ್ಲಿ ಈ ಬಗೆಯ ಹೇಳಿಕೆಗಳು ಬಂದಿವೆ. ಲೋಕಸಭಾ ಸದಸ್ಯರು, ಮಂತ್ರಿಗಳು ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟಿದ್ದಾರೆ. ಎಲ್ಲವೂ ಸ್ಟೇಟ್‌ಮೆಂಟ್ ಗಳಲ್ಲಷ್ಟೇ ಉಳಿಯಿತೇ ವಿನಹ ಕರ್ನಾಟಕಕ್ಕೆ ಸ್ಟೀಲ್‌ಪ್ಲಾಂಟ್ ಬರಲಿಲ್ಲ. ಇದು ಹದಿಮೂರನೇ ವರ್ಷ.

ಹನ್ನೆರಡು ವರ್ಷಗಳಿಂದ ಈ ಕೆಲಸವನ್ನು ಮಾಡದೇ ಇರತಕ್ಕಂಥ ಸರ್ಕಾರ ಉಕ್ಕಿನ ಸರ್ಕಾರ ಆಗಿತ್ತೇ ಎನ್ನುವುದನ್ನು ತಾವು ಹೇಳಬೇಕು. ಇದಕ್ಕೆ Weak Government responsible. ನೀವೇನು ಮಾಡುತ್ತಿದ್ದೀರಿ. ಬೇರೆ ಸರ್ಕಾರಗಳು ಕೇಂದ್ರದೊಡನೆ ಹೆದರಿಸಿ ಬೆದರಿಸಿ ಅಥವಾ ಕಿತ್ತಾಡಿ ಬೇಕಾದುದನ್ನು ಮಾಡಿಸಿಕೊಳ್ಳುತ್ತಿದ್ದರೆ, ನೀವು ಕೇಂದ್ರ ಸರ್ಕಾರದ ಹತ್ತಿರ ಹೋಗಿ ಅವರು ಹೇಳಿದ್ದಕ್ಕೆಲ್ಲಾ 'ಯಸ್' ಎಂದು ಬಂದುಬಿಡುತ್ತಿದ್ದಿರಿ. ಇಲ್ಲಿಂದ ಡೆಲ್ಲಿಗೆ ಹೋಗುವುದು, ಡೆಲ್ಲಿಯಿಂದ ಇಲ್ಲಿಗೆ ಬರುವುದು ಅಷ್ಟೇ ಮಾಡಿದ್ದು. ನಮಗೆ ಬರಬೇಕಾದದ್ದು ಏನೂ ಆಗಿಲ್ಲ. ಈ ಒಂದು ರಿಪೋರ್ಟ್ ಫಾರಿನ್ ಎಕ್ಸ್‌ಪೋರ್ಟ್ಸ್, ರಿಪೋರ್ಟ್ ಇದೆ. ಇದು ಕೇಂದ್ರ ಸರ್ಕಾರದ ವರದಿ. ಹನ್ನೆರಡು ವರ್ಷಗಳ ಹಿಂದೆ ತಯಾರು ಮಾಡಿದ ವರದಿಯ ಪ್ರಕಾರ ಸೆಂಟ್ರಲ್ ಗವರ್ನಮೆಂಟ್ ರಿಪೋರ್ಟ್ ಕೊಟ್ಟಿದೆ. ಪಯೇಬಿಲಿಟಿ ರಿಪೋರ್ಟ್ ಕೊಟ್ಟಿದ್ದಾರೆ, ಫೀಸಿಬಿಲಿಟಿ ರಿಪೋರ್ಟ್ ಕೊಟ್ಟಿದ್ದಾರೆ. ಬೇಕಾಗಿರತಕ್ಕಂಥ ರಾ ಮೆಟರಿಯಲ್ಸ್ ಸಿಗುತ್ತದೆಯೆಂದು ಕರ್ನಾಟಕ ಸರ್ಕಾರ ವಾಗ್ದಾನವನ್ನು ಕೊಟ್ಟಿದೆ. ಆದರೆ ಕೇಂದ್ರ ಸರ್ಕಾರದವರು ಒರಿಸ್ಸಾಕ್ಕೆ ಸ್ಟೀಲ್ ಪ್ಲಾಂಟ್‌ನ್ನು ಕೊಟ್ಟರು. ಇದು ೧೯೭೮ನೇ ಇಸವಿಯಲ್ಲಿ ಬಂತು. ಇದಕ್ಕೆ ಪಯಾಬಿಲಿಟಿ ರಿಪೋರ್ಟ್ ಇರಲಿಲ್ಲ, ಫೀಸಿಬಿಲಿಟಿ ರಿಪೋರ್ಟ್ ಇರಲಿಲ್ಲ. ಸ್ಟೀಲ್ ಪ್ಲಾಂಟ್‌ನ್ನು ಕೊಟ್ಟಾದ ಮೇಲೆ ಇವುಗಳನ್ನು ತರಿಸಿಕೊಂಡರು. ಏಕೆಂದರೆ ಆ ರಾಜ್ಯ ಸರ್ಕಾರ ಶಕ್ತಿದಾಯಕವಾದ, ಸಾಮರ್ಥ್ಯದಿಂದ ಕೂಡಿದ ಸರ್ಕಾರವಾಗಿತ್ತು. ಇದರಿಂದಾಗಿ ಇವತ್ತು ಕರ್ನಾಟಕದ ಜನತೆಗೆ ಬಹಳ ನಷ್ಟ ಮತ್ತು ತೊಂದರೆಯುಂಟಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಬಹುಶಃ ನನಗನ್ನಿಸುತ್ತದೆ ಇದು ಒಂದು ಪಕ್ಷಪಾತದ ನೀತಿಯಾಗಿದೆ. ಇದಕ್ಕೆ ಇದಕ್ಕಿಂತ ದೊಡ್ಡದಾದ ಬೇರೆ ಉದಾಹರಣೆ ಬೇಕಾಗಿಲ್ಲ. ಯಾವುದೇ ಸರ್ಕಾರ ಆಗಲಿ, ಜನತೆಯ ಹಿತದೃಷ್ಟಿಯಿಂದ ನೋಡಿದರೆ ನಮಗೆ ಹೆಚ್ಚು ಹೆಚ್ಚು ಕಾರ್ಖಾನೆಗಳು ಬೇಕು. ಆದರೆ ಕಾರ್ಖಾನೆಗಳು ಬಂದಿಲ್ಲ. ನಿರುದ್ಯೋಗ ಮಾತ್ರ ಬೆಳೆದಿದೆ. ಇವತ್ತು ಈವೊಂದು ಕಾರ್ಖಾನೆ ಬಂದಿದ್ದರೆ ಸುಮಾರು ಅರವತ್ತು ಸಾವಿರ ಸಂಸಾರಗಳು ಜೀವನ ಮಾಡುತ್ತಿದ್ದವು. ಈಗ ಈ ಸಂಖ್ಯೆ ಒಂದು ಲಕ್ಷವಾದರೂ ಆಗುತ್ತದೆ. ಈ ಪ್ರಾಜೆಕ್ಟ್‌ನ್ನು ಕಾರ್ಯಗತ ಮಾಡಿದ್ದರೆ ಒಂದು ಲಕ್ಷ ಸಂಸಾರಗಳು ಜೀವನ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಹನ್ನೆರಡು ವರ್ಷಗಳಿಂದ ಈ ದೊಡ್ಡ ಪ್ರಾಜೆಕ್ಟ್‌ನ್ನು ಕೈಗೆತ್ತಿಕೊಂಡು ಸ್ಥಾಪನೆ ಮಾಡತಕ್ಕಂಥ ಸಾಮರ್ಥ್ಯ ಇಲ್ಲವೆಂದರೆ ಬಹುಶಃ ಇದಕ್ಕಿಂತ ದೊಡ್ಡದಾದ ದ್ರೋಹ ಕನ್ನಡಿಗರಿಗೆ ಬೇರೆ ಇರಲಾರದೆಂದು ಹೇಳಬೇಕಾಗುತ್ತದೆ.

ಹಿಂದಿನ ಯೋಜನೆಗಳನ್ನು ಕೈಬಿಟ್ಟರು. ಈಗ ಹೊಸ ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ. ಪರಿಷ್ಕೃತ ಯೋಜನೆ (ರಿವೈಸ್ಡ್ ಸ್ಕೀಮ್)ಯನ್ನು ಹಾಕಿಕೊಂಡಿದ್ದಾರೆ. ೧೯೮೨ನೇ ಸೆಪ್ಟೆಂಬರ್‌ನಲ್ಲಿ ಇದನ್ನು ಮಂಡಿಸಿದ್ದು ಬಹುಶಃ ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಆಗಿದೆಯೆಂದು ಕಾಣುತ್ತವೆ. ಈಸ್ಟ್ ಜರ್ಮನಿ, ಸ್ವೀಡನ್, ಅಮೆರಿಕಾ ದೇಶಗಳಿಂದ ತಾಂತ್ರಿಕ ಜ್ಞಾನವನ್ನು ತರಿಸಿಕೊಂಡಿದ್ದೇವೆಂದು ಸ್ಟೀಲ್ ಅಥಾರಿಟಿಯವರು ಹೇಳುತ್ತಾರೆ. ಅದಿರು ಸಿಗುತ್ತಿದೆ. ಪ್ರಯೋಗ ನಡೆಸುತ್ತಿದ್ದೇವೆ. ಅದರ ಮೇಲೆ ಅತ್ಯಾಧುನಿಕ ವಿಧಾನವನ್ನು ಸಮೀಕ್ಷೆಯಲ್ಲಿ ಒಪ್ಪಿಕೊಂಡಿದ್ದೇವೆ. ಇದು ಹೊಸ ಯೋಜನೆ. ಇದನ್ನು ಒಪ್ಪಿಕೊಂಡ ಮೇಲೆ, ಸ್ಟೀಲ್ ಅಥಾರಿಟಿಯವರು ಶಿಫಾರಸ್ಸು ಮಾಡಿದ ಮೇಲೆ ಕೇಂದ್ರ ಸರ್ಕಾರ ಇದನ್ನು ಒಪ್ಪಿಕೊಳ್ಳಬೇಕಾಗಿತ್ತು. ಈ ಅತ್ಯಾಧುನಿಕ ವಿಧಾನದಿಂದ ವಿದ್ಯುತ್ ಕಡಿಮೆ ಇದ್ದರೂ ಕೆಲಸ ಮಾಡಬಹುದು. ಈ ಯೋಜನೆ ಪ್ರಕಾರ ಸರ್ಕಾರದ ಮುಂದಿರತಕ್ಕದ್ದು, ಮೊದಲನೇ ಹಂತದಲ್ಲಿ ೧೦ ಲಕ್ಷ ಟನ್ ಉತ್ಪಾದನಾ ಸಾಮರ್ಥ್ಯದ ಒಂದು ಯೋಜನೆಯನ್ನು ನಾವು ಮಾಡಿದ್ದೇವೆ. ಇನ್ನು ಮೂರು ಹಂತಗಳಲ್ಲಿ ಈ ಸಾಮರ್ಥ್ಯವನ್ನು ಜಾಸ್ತಿ ಮಾಡುತ್ತೇವೆ ಎಂದು ಉಕ್ಕಿನ ಸಚಿವಾಲಯದಲ್ಲಿ ಹೇಳಿದ್ದಾರೆ. ಪ್ರಾರಂಭದಲ್ಲಿ ಇದಕ್ಕೆ ೧೬೦೦ ಕೋಟಿ ರೂಪಾಯಿ ಬಂಡವಾಳ ಬೇಕು. ನ್ಯೂಕ್ಲಿಯರ್ ಪ್ಲಾಂಟ್‌ಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಏಶಿಯನ್ ಗೇಮ್ಸ್‌ಗೆ ೧೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಕಾಮನ್‌ವೆಲ್ತ್ ಸಭೆಗೆ ೧೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದಕ್ಕೆ ಮಾತ್ರ ೧೬೦೦ ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಸರ್ಕಾರಕ್ಕೆ ಆಗಲಿಲ್ಲವೇ? ಇದೇ ಏನು ನೀವು ಕರ್ನಾಟಕದ ಜನತೆಯ ಮೇಲೆ ಇಟ್ಟಿರತಕ್ಕ ಅಭಿಮಾನ ಎಂದು ಕೇಳಬೇಕಾಗಿದೆ. ನೀವು ಹೇಳುತ್ತೀರಿ ಅಭಿಮಾನ ಬಹಳ ಇದೆ ಎಂದು. ಇದಕ್ಕೆ ಏನು ಹೇಳಬೇಕು? ೧೬೦೦ ಕೋಟಿ ರೂಪಾಯಿಗಳೇನು ಒಂದೇ ವರ್ಷದಲ್ಲಿ ಖರ್ಚು ಮಾಡತಕ್ಕಂಥಾದ್ದಲ್ಲ. ಹಲವಾರು ವರ್ಷಗಳ ಅವಧಿಯಲ್ಲಿ ಖರ್ಚು ಮಾಡತಕ್ಕಂಥಾದ್ದು. ಈ ಪರಿಷ್ಕೃತ ಯೋಜನೆಯನ್ನು ಖಂಡಿತವಾಗಿಯೂ ಕಾರ್ಯಗತ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದಕ್ಕೆ ರಾ ಮೆಟರಿಯಲ್ ಸಿಗುತ್ತಿದೆ. ಬೇಕಾಗಿರತಕ್ಕಂಥ ಕಲ್ಲಿದ್ದಲನ್ನು ಬಂಗಾಳ, ಬಿಹಾರದಿಂದ ತರಿಸಬೇಕು. ಇದಕ್ಕಾಗಿ ಖರ್ಚು ಬಹಳವಾಗುತ್ತದೆ. ಈ ಯೋಜನೆಯನ್ನು ಆಂಧ್ರಪ್ರದೇಶದ ಪೆನುಗೊಂಡದ ಶಿಂಗರೇಣಿಯಲ್ಲಿ ಕಲ್ಲಿ

ದ್ದಲು ಗಣಿ ಇದೆ. ಇದರಿಂದ ಕಲ್ಲಿದ್ದಲನ್ನು ಬಹಳ ಹತ್ತಿರದಿಂದ ಸಾಗಿಸಬಹುದಾಗಿದೆ. ಮತ್ತು ಸಾಗಣೆ ವೆಚ್ಚ ಕೂಡ ಕಡಿಮೆಯಾಗುತ್ತದೆ. ಇದೇನೂ ದೊಡ್ಡದಲ್ಲ. ಇದರ ಜೊತೆಗೆ ಕರ್ನಾಟಕ ಸರ್ಕಾರದವರು ಬೇಕಾದಷ್ಟು ನೀರು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಎಂಟುನೂರು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಜಮೀನು ಕೊಟ್ಟಿದ್ದಾರೆ, ನೀರು ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ ಕೊಡತಕ್ಕಂಥಾದ್ದು ನಮ್ಮ ಜವಾಬ್ದಾರಿ ಇದೆ. ಇದರ ಜೊತೆಯಲ್ಲಿ ಪರಿಸರ ಮಾಲಿನ್ಯವನ್ನು ಕಂಟ್ರೋಲ್ ಮಾಡುವುದಕ್ಕೂ ಸಾಧ್ಯವಿದೆ, ಈ ಹೊಸ ವಿಧಾನದಲ್ಲಿ ಕಲ್ಲಿದ್ದಲು ಇದೆ, ನೀರು ಇದೆ, ಎಂಟುನೂರು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ, ಇಷ್ಟೆಲ್ಲ ಇದ್ದರೂ ಕೂಡ ಒಂಭತ್ತು ಕೋಟಿ ರೂಪಾಯಿಯವರೆಗೆ ಖರ್ಚು ಮಾಡಿ ಇವತ್ತಿನದಿವಸ ಈ ಪ್ರಾಜೆಕ್ಟ್ ಬಗ್ಗೆ ಮೀನಮೇಷ ಎಣಿಸುತ್ತಿರುವುದು ನಿಮಗೆ ನಮ್ಮ ಮೇಲಿರ ತಕ್ಕಂಥ ಅಭಿಪ್ರಾನವೇ ಎಂದು ಕೇಳಬೇಕಾಗಿದೆ. ಇದರ ಬಗ್ಗೆ ಪೂರ್ತಿ ಜವಾಬ್ದಾರಿ ಯನ್ನು ಕಾಂಗ್ರೆಸ್ (ಐ) ನವರು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಸಹಕಾರ ಕೊಟ್ಟು ಆದಷ್ಟು ಬೇಗ ಇದನ್ನು ಮಾಡುವಂಥ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತಿದ್ದೇನೆ. ಮಿನಿಸ್ಟ್ರಿ ಆಫ್ ಸ್ಟೀಲ್ ಯಾವಾಗ ಒಪ್ಪಿಗೆ ಕೊಟ್ಟರೂ ನಾವು ಪ್ರಾರಂಭ ಮಾಡುವುದಕ್ಕೆ ತಯಾರಿದ್ದೇವೆ ಎಂದು ಉಕ್ಕಿನ ಪ್ರಾಧಿಕಾರ ಹೇಳುತ್ತದೆ. ಹೀಗಿರುವಾಗ ಇದು ಏತಕ್ಕೆ ಡಿಲೇ ಆಗಿದೆ ಅನ್ನುವುದನ್ನು ನಾವು ಗಮನಕ್ಕೆ ತೆಗೆದುಕೊಂಡರೆ ಇದಕ್ಕೆ ರಾಜಕೀಯ ಒಂದು ಶಕ್ತಿಯೇ ಕಾರಣ ಅಂತ ಹೇಳಬಹುದು. ಈ ಉಕ್ಕಿನ ಕಾರ್ಖಾನೆ ಬಗ್ಗೆ ಆದಷ್ಟು ತೀವ್ರವಾಗಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುವ ಹಾಗೆ ನಮ್ಮ ಸ್ನೇಹಿತರು ಪ್ರಯತ್ನ ಮಾಡ ಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರನ್ನು ನೋಡಬೇಕು ಎಂದು ಅಲ್ಲಿನ ಒಂದು ಎಂ.ಪಿ. ಗಳ ಸಭೆ ಕರೆದರು. ಆಗ ಶ್ರೀ ವಿರಪ್ಪಮೊಯ್ಲಿರವರು ಈಗ ಈ ಸಭೆ ಕರೆಯುವುದು ಬೇಡ ನಾನು ಇದರ ಬಗ್ಗೆ ಮಾತನಾಡಿದ್ದೇನೆ, ಈ ಸಭೆಯನ್ನು ಮುಂದಕ್ಕೆ ಹಾಕಿ ಎಂದು ಹೇಳಿದ್ದಕ್ಕೆ ಆ ಸಭೆಯನ್ನು ಮುಂದಕ್ಕೆ ಹಾಕಿದರು. ಇದರ ಬಗ್ಗೆ ನಾನು ಹೇಳುವುದೇನೆಂದರೆ ಈ ವಿಷಯವಾಗಿ ನಾವು ನಮ್ಮ ಛಲವನ್ನು ಸಾಧನೆ ಮಾಡ ಬೇಕು, ಇದನ್ನು ನಮ್ಮ ಸ್ವಾಭಿಮಾನದ ಪ್ರಶ್ನೆಯಿಂದ ನೋಡಬಾರದು. ಈ ಛಲವನ್ನು ನಾವು ಸಾಧನೆ ಮಾಡಬೇಕಾದರೆ ಇದಕ್ಕೆ ಉಕ್ಕಿನಂಥಾ ನರಗಳು ಬೇಕಾಗುತ್ತದೆ, ಮತ್ತು ಇದರ ಬಗ್ಗೆ ಎಲ್ಲರೂ ಸಹ ಸಾಕಷ್ಟು ಹೋರಾಟ ಮಾಡುವುದಕ್ಕೆ ತಯಾರಾಗಬೇಕು. ನಾವು ಮೊದಲೇ ಈ ಬಗ್ಗೆ ಏನು ಕೇಳಬೇಕೋ ಅದನ್ನು ಕೇಳಿದ್ದೇವೆ. ಅವರನ್ನು ನೋಡೂ ಇದ್ದೇವೆ, ಮನವಿಗಳನ್ನು ಸಹ ಕೊಟ್ಟಿದ್ದೇವೆ. ಇನ್ನು ಉಳಿದಿರುವುದು ಹೋರಾಟದ ಪ್ರಯತ್ನ ಅಷ್ಟೇ ಹಿಂದಿನ ಸರ್ಕಾರವೂ ಇದರ ಬಗ್ಗೆ ಸಾಕಷ್ಟು ಹೇಳಿದೆ. ಒಂದುವೇಳೆ ಈಗಲಾದರೂ ಕೂಡ ಅದು ಆಗಲಿಲ್ಲ ಎಂದರೆ ಇಡೀ ರಾಜ್ಯವೇ ಚಳುವಳಿ ಮಾಡಬೇಕಾಗುತ್ತದೆ, ಅದನ್ನು ನಾವು ಲೀಡ್ ಮಾಡುತ್ತೇವೆ ಅನ್ನುವ ಭರವಸೆ ಯನ್ನು ನೀವು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ನಮ್ಮ ರಾಜ್ಯದ ಮುಖ್ಯಮಂತ್ರಿಗಳು ರಾಷ್ಟ್ರದ ಪ್ರಧಾನ ಮಂತ್ರಿಗಳಿಗೆ ಈ ಬಗ್ಗೆ ಒಂದು ಕಾಗದ ಬರೆದಿದ್ದಾರೆ. ಇದುವರೆಗೂ ಸಹ ಅವರಿಂದ ಉತ್ತರವೇ ಬಂದಿಲ್ಲ. ಏತಕ್ಕೆ ಅನ್ನುವುದು ಗೊತ್ತಿಲ್ಲ. ರಾಜ್ಯದ ಮುಖ್ಯಮಂತ್ರಿಗಳಾಗಿರತಕ್ಕಂಥಾವರು ಇಂಥಾ ಬಹುಮುಖ್ಯವಾದ ವಿಷಯ ದಲ್ಲಿ ರಾಷ್ಟ್ರದ ಪ್ರಧಾನ ಮಂತ್ರಿಗಳಿಗೆ ಕಾಗದ ಬರೆದರೆ ತಕ್ಷಣ ಉತ್ತರ ಕೊಡಬೇಕಾದ್ದು ಅವರ ಕರ್ತವ್ಯವಲ್ಲವೇ ? ಇದರ ಬಗ್ಗೆ ತಮಗೆ ಸಾಧ್ಯವಾಗುತ್ತದೋ ಇಲ್ಲವೆ ಅನ್ನುವುದನ್ನು ಹೇಳ ಬೇಕಾಗಿತ್ತು. ರಾಜ್ಯದ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಸಭೆಯನ್ನು ಕರೆದಾಗ ''ನಾನು ಆ ಬಗ್ಗೆ ಮಾತನಾಡಿದ್ದೇನೆ, ಸಭೆಯನ್ನು ಮುಂದೂಡಿ'' ಅಂತ ಹೇಳಿದರಲ್ಲಾ ಏತಕ್ಕಾಗಿ ಹೀಗೆ ಮಾಡಿದರು ಅವರೊಂದಿಗೆ ಏನು ಮಾತನಾಡಿದರು ಪ್ರಧಾನ ಮಂತ್ರಿಯೊಂದಿಗೆ ಏನು ಭರವಸೆ ಯನ್ನು ತೆಗೆದುಕೊಂಡರು ಎಂಬ ಬಗ್ಗೆ ಮಾನ್ಯ ವೀರಪ್ಪಮೊಯ್ಲಿರವರು ಸಾರ್ವಜನಿಕರಿಗೆ ತಿಳಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲದೆ ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದವರೇ ಆದ ಳ ಜನ ಮಂತ್ರಿಗಳು ಇದ್ದಾರೆ ಮತ್ತು ನಮ್ಮ ರಾಜ್ಯದಿಂದ ಪ್ರತಿನಿಧಿಸಿರತಕ್ಕಂಥಾ ೨೭ ಜನ ಎಂ.ಪಿ.ಗಳೂ ಇದ್ದಾರೆ. ೨೭ ಜನ ಎಂ.ಪಿ.ಗಳೂ ಕೂಡ ಒಂದೇ ಪಕ್ಷಕ್ಕೆ ಅಂದರೆ ಕಾಂಗ್ರೆಸ್ ಪಕ್ಷಕ್ಕೇ ಸೇರಿದ ವರಾಗಿದ್ದಾರೆ. ಅವರೆಲ್ಲಾ ಈ ವಿಚಾರದಲ್ಲಿ ಏನು ಮಾಡುತ್ತಿದ್ದಾರೆಎನ್ನು ತಕ್ಕಂಥಾದನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ. ಈ ಒಂದು ದೊಡ್ಡ ಉಕ್ಕಿನ ಸ್ಥಾವರವನ್ನು ಇನ್ನೂ ಇಲ್ಲಿ ಪ್ರಾರಂಭ ಮಾಡಲಿಕ್ಕೆ ಏತಕ್ಕೆ ಸಾಧ್ಯವಾಗಲಿಲ್ಲ ಅನ್ನುವುದಕ್ಕೆ ಕಾರಣ ಗೊತ್ತಾಗಿಲ್ಲ. ಉತ್ತರ ಭಾರತದಲ್ಲಿ ಇಂಥ ದೊಡ್ಡ ದೊಡ್ಡ ಸ್ಥಾವರಗಳನ್ನು ಸಾಕಷ್ಟು ಮಾಡಿಕೊಂಡಿದ್ದಾರೆ. ನಮ್ಮ ಕರ್ನಾಟಕದಲ್ಲಿ ಒಂದನ್ನಾದರೂ ಕೂಡ ಇಂಥಾ ದೊಡ್ಡ ಸ್ಥಾವರವನ್ನು ಮಾಡಬೇಕೆಂದು ನಾವು ನಮ್ಮ ರಾಜ್ಯದ ಜನತೆಯ ಪರವಾಗಿ ಕೇಳುತ್ತಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ ನಮ್ಮ ರಾಜ್ಯದಿಂದ ಪ್ರತಿನಿಧಿಸಿರತಕ್ಕಂಥಾ ೨೭ ಜನ ಎಂ.ಪಿ. ಗಳೂ

ಒಂದೇ ಪಕ್ಷದವರಾಗಿದ್ದು ಜೊತೆಗೆ ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದ ಪರವಾಗಿ ಇಬ್ಬರು ಮಂತ್ರಿಗಳು ಇ ವರ್ಷದಿಂದ ಇದ್ದರೂ ಕೂಡ ಈ ವಿಜಯನಗರ ಉಕ್ಕಿನ ಕಾರ್ಖಾನೆ ಇನ್ನೂ ಸ್ಥಾಪನೆಯಾಗದೇ ಇರುವುದರಿಂದ ನಮಗೆ ಏನು ಅನಿಸುತ್ತದೆ ಎಂದರೆ, ಇವರಲ್ಲಿ ಇಷ್ಟು ಸಾಮರ್ಥ್ಯ ಇಲ್ಲ ಎಂದು ನನಗೆ ಅನಿಸುತ್ತದೆ.ಆದುದರಿಂದ ಇಷ್ಟು ಸಾಮರ್ಥ್ಯ ಇಲ್ಲದೇ ಹೋದ ಮೇಲೆ ಅವರು ಆ ಜಾಗವನ್ನು ಬಿಟ್ಟುಕೊಡಬೇಕು ಎಂದು ನಾವಾದರೂ ಕೇಳಬೇಕಾಗುತ್ತದೆ. ಈಗಾಗಲೇ ಇದರ ಬಗ್ಗೆ ಜನರು ಚಳುವಳಿ ಮಾಡುತ್ತಿದ್ದಾರೆ. ಇದು ಇತ್ಯರ್ಥವಾಗದೇ ಹೋದ ಪಕ್ಷದಲ್ಲಿ ಈ ಚಳುವಳಿಯು ಉಗ್ರವಾದ ಸ್ವರೂಪ ತಳೆದು ಕೊಳ್ಳುವುದರಲ್ಲಿ ಯಾವ ಸಂಶಯವೂ ಇಲ್ಲ. ಮಾನ್ಯ ಶ್ರೀ ಫೋರ್ಪಡೆಯವರು ಕಾಂಗ್ರೆಸ್ಸಿನಲ್ಲಿದ್ದುಕೊಂಡು ಕಾಂಗ್ರೆಸ್ ಸರ್ಕಾರ ಮಾಡತಕ್ಕಂತಾದ್ದು ಸರಿಯಲ್ಲವೆಂದು ಹೇಳಿದ್ದಾರೆ. ವಿಜಯನಗರ ಉಕ್ಕಿನ ಕಾರ್ಖಾನೆ ಏನಾದರೂ ಸ್ಥಾಪನೆಯಾದರೆ ಕರ್ನಾಟಕದಲ್ಲಿ ಎಷ್ಟು ಜನ ನಿರುದ್ಯೋಗಿಗಳಿದ್ದಾರೆ, ಅವರಿಗೆಲ್ಲಾ ಸಾಮಾನ್ಯವಾಗಿ ಕೆಲಸ ಸಿಗುತ್ತದೆ, ಅಲ್ಲದೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯೂ ಸಹ ಉತ್ತಮಗೊಳ್ಳುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ವಿಷಯದಲ್ಲಿ ಕೇಂದ್ರಸರ್ಕಾರದವರು ಏನಾದರೂ ನಮ್ಮ ಮಾತನ್ನು ಕೇಳದೇ ಹೋದಪಕ್ಷದಲ್ಲಿ ನಾನು ರಾಜೀನಾಮೆಯನ್ನು ಕೊಡಲೂ ಸಹ ಸಿದ್ಧನಿದ್ದೇನೆ ಅಂತ ಶ್ರೀ ಫೋರ್ಪಡೆಯವರು ಹೇಳಿದ್ದರು. ಈ ವಿಚಾರದಲ್ಲಿ ಕೇಂದ್ರಸರ್ಕಾರದ ಉಕ್ಕು ಮತ್ತು ಗಣಿ ಮಂತ್ರಿಗಳಾದ ಶ್ರೀ ಎನ್. ಕೆ. ಪಿ. ಸಾಳ್ವೆಯವರು, ''ನಾನು ಇದರ ಬಗ್ಗೆ ೧೪ನೇ ಡಿಸೆಂಬರ್ ತಿಂಗಳ ಒಳಗೆ ಒಂದು ತೀರ್ಮಾನ ಕೈಗೊಳ್ಳುತ್ತೇನೆ'' ಅಂತ ಹೇಳಿದ್ದರು. ಆದರೆ ೧೪ನೇ ಡಿಸೆಂಬರ್ ಕಳೆದುಹೋಗಿ ಈಗ ೨೦ನೇ ಜನವರಿ ಬಂದಿದೆ. ಒಂದು ತಿಂಗಳ ನೋಟಾಯಿತು. ಅಂದಿನಿಂದ ಇಂದಿನವರೆಗೂ ಅವರು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಏನು ಉತ್ತರವನ್ನೂ ತಿಳಿಸಿಲ್ಲ. ಇದನ್ನು ನೋಡಿದರೆ ಕೇಂದ್ರ ಸರ್ಕಾರಕ್ಕೆ ಎಷ್ಟು ಆಲಕ್ಷ್ಯ ಇವೆ ಎಂಬುದು ವ್ಯಕ್ತವಾಗುತ್ತದೆ. ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಮಾತನ್ನು ಹೇಳಲು ಇಚ್ಛಿಪಡುತ್ತೇನೆ. ಈಗ್ಗೆ ಕೆಲವು ದಿವಸಗಳ ಹಿಂದೆ ಹೊಸಪೇಟೆಯಿಂದ ಸುಮಾರು ೫೦೦ ಜನಕ್ಕೂ ಮೇಲ್ಪಟ್ಟು ವಿಜಯನಗರದ ಉಕ್ಕು ಕಾರ್ಖಾನೆ ಸ್ಥಾಪನೆಯಾಗಬೇಕೆಂದು ಸೈಕಲ್ ಮೇಲೆ ಏನು ಸವಾರಿ ಮಾಡಿಕೊಂಡು ಬಂದು ಮನವಿಯನ್ನು ಅರ್ಪಿಸಿದ್ದಾರೆ, ಈ ಸಂದರ್ಭದಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರಿಗೂ ಮತ್ತು ಶ್ರೀಮಾನ್ ಬೊಮ್ಮಾಯಿಯವರಿಗೂ ಸಹ ಒಂದು ಮಾತನ್ನು ಹೇಳಿಬಯಸುತ್ತೇನೆ. ಇದರ ಬಗ್ಗೆ ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳದೇ ಹೋದರೆ ಮೊನ್ನೆಯ ದಿವಸ ಏನು ಒಂದು ಚಳುವಳಿ ನಡೆಯಿತು ಇದು ಇನ್ನೂ ಉಗ್ರವಾಗಿ ನಡೆಯುತ್ತದೆ. ವಿಜಯನಗರ ಉಕ್ಕು ಕಾರ್ಖಾನೆಯ ಶಂಕು ಸ್ಥಾಪನೆಯಾಗಿ ೧೨ ವರ್ಷವಾದರೂ ಇನ್ನೂ ಆಗಿಲ್ಲ. ಈ ಬಗ್ಗೆ ಸರ್ಕಾರ ಒಂದು ಕಾರ್ಯಕ್ರಮವನ್ನು ಕೊಡಲೇ ಹಾಕಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ತಮಗೆ ಹೇಳಬೇಕಾದರೆ ಮೈಸ್ಕ್ ಬೆಂಗಳಾ, ಆಂಧ್ರಪ್ರದೇಶ ಮತ್ತು ಇನ್ನೂ ಇತರ ರಾಜ್ಯಗಳಿಗೆ ಕೇಂದ್ರ ಸರ್ಕಾರದವರು ಬೇಕಾದಷ್ಟು ಓಪರ್ ಡ್ಯಾಫ್ಟ್ ಕೊಡುತ್ತಾರೆ. ನಮ್ಮನ್ನು ತೀರಿಸಬೇಕೆಂದು ಒತ್ತಾಯ ಮಾಡುತ್ತಾರೆ. ಅಷ್ಟೇ ಏಕೆ ಇತ್ತೀಚೆಗೆ ತಮಿಳುನಾಡಿನಲ್ಲಿ ಎಕ್ಕಿ ಸರಬರಾಜು ಕೇಂದ್ರದಿಂದ ಸರಿಯಾಗಿ ಆಗದೇ ಇದ್ದುದರಿಂದ ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀ ಎಂ. ಜಿ. ರಾಮಚಂದ್ರನ್‌ರವರು ಉಪವಾಸ ಮಾಡಿದಕ್ಕೆ ಆ ತಕ್ಷಣವೇ ಅವರಿಗೆ ಎಕ್ಕಿ ಸರಬರಾಜು ಮಾಡಿದರು. ಅವರೂ ಸಹ ಕಾಂಗ್ರೆಸ್ (ಐ)ನವರೇ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮಗೆ ಅಂತಹ ಉಕ್ಕಿನ ಸರಗಳ ವ್ಯಕ್ತಿ ಇರಬೇಕೇ ಹೊರತು ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ನಿಜವಾಗಿಯೂ ಹೇಳಬೇಕಾದರೆ ಈಗ ಇದರ ಬಗ್ಗೆ ನೀವು ಮಾಡಿರತಕ್ಕಂಥಾ ಮನವಿಗಳು ಏನೇನು ಸಾಲದು, ಇದರ ಬಗ್ಗೆ ನಿಮ್ಮ ಶಕ್ತಿ ಸಾಮರ್ಥ್ಯವನ್ನು ತೋರಿಸಬೇಕು ಅಲ್ಲದೆ ಇಡೀ ರಾಜ್ಯದ ಜನತೆ ನಮ್ಮ ಸರ್ಕಾರದ ಕಡೆ ಇದರ ಬಗ್ಗೆ ಎದರು ನೋಡುತ್ತಾ ಇದೆ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ರಾಜ್ಯದ ಯುವಕರಿಗೆ ಹಾಗೂ ಜನತೆಗೆ ತಾವು ಏನು ಭರವಸೆ ಕೊಟ್ಟಿದ್ದೀರೋ ಅದನ್ನು ಈಡೇರಿಸಿಕೊಡಬೇಕೆಂದು ಹೇಳುತ್ತೇನೆ. ಮಾನ್ಯ ವೀರಪ್ಪಮೊಯ್ಲಿಯವರು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಕಿ ಆದಷ್ಟು ಶೀಘ್ರವಾಗಿ ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗುವ ಹಾಗೆ ಪ್ರಯತ್ನ ಮಾಡಬೇಕೆಂದು ಹೇಳಿ, ನಾನು ಈ ಬಗ್ಗೆ ತಂದಿರತಕ್ಕಂತ ನಿರ್ಣಯಕ್ಕೆ ತಾವೆಲ್ಲರೂ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹನುಮಂತರಾವ್ ದೇಸಾಯಿ.—ಮಾನ್ಯ ಸದಸ್ಯರಿಗೆ ನಾನು ಬೆಂಬಲ ಕೊಡುವುದಲ್ಲದೆ, ಈ ಸಭೆ ಯುನಾನಿಮಸ್ ಆಗಿ ಒಪ್ಪಬೇಕೆಂದು ಕೇಳುತ್ತೇನೆ. ಹಾಗೂ ಈ ವಿಜಯನಗರ ಉಕ್ಕಿನ

ಕಾರ್ಖಾನೆ ಬೇಗನೆ ಸ್ಥಾಪನೆ ಆಗುವ ಹಾಗೆ ಎಲ್ಲರೂ ಪ್ರಯತ್ನ ಪಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಈ ವಿಜಯನಗರ ಉಕ್ಕಿನ ಕಾರ್ಖಾನೆ ಕರ್ನಾಟಕ ರಾಜ್ಯದ ಒಂದು ಜೀವಾಳ. ಇದು ಎಲ್ಲಾ ಪಕ್ಷದವರು ಒಪ್ಪಿಕೊಂಡಂತಹ ವಿಚಾರ. ಆದರೆ ಈ ಉಕ್ಕಿನ ಕಾರ್ಖಾನೆ, ಪಸ್ತು ಯಾವುದೇ ರಾಜಕೀಯ ಪಕ್ಷಕ್ಕೆ ಆಗಲಿ ಅಥವಾ ಯಾವುದೇ ಒಂದು ವ್ಯಕ್ತಿಯ ಪ್ರತಿಷ್ಠೆಯ ಪಸ್ತುವಾಗಲೀ ಆಗಬಾರದು. ಅದಕ್ಕಾಗಿ ನಾನು ಒಮ್ಮೆ ಈ ವಿಚಾರದ ಬಗ್ಗೆ ಪತ್ರಿಕೆಗಳಲ್ಲೂ ಸಹ ಪ್ರಸ್ತಾಪ ಮಾಡಿದ್ದೆ. ಈ ಮಾತನ್ನು ಸನ್ಮಾನ್ಯ ಕೈಗಾರಿಕಾ ಮಂತ್ರಿಗಳಾದ ಶ್ರೀ ಎಸ್.ಆರ್. ಬೊಮ್ಮಾಯಿಯವರುಕೂಡಾ ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಇದರಲ್ಲಿ ನಾವು ರಾಜಕೀಯವನ್ನು ಎಷ್ಟು ಬಳಸಲಿಕ್ಕೆ ಪ್ರಯತ್ನ ಮಾಡುತ್ತೇವೆ ಅಷ್ಟರಮಟ್ಟಿಗೆ ಕರ್ನಾಟಕದ ಜೀವಾಳವಾದ ಕರ್ನಾಟಕದ ಆತ್ಯುತ್ತಮವಾದ ಉಕ್ಕಿನ ಕಾರ್ಖಾನೆ ನಮ್ಮಿಂದ ದೂರ ದೂರ ಹೋಗಬಹುದು.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಸಭೆಗೆ ಬರುವುದಕ್ಕೆ ಮೊದಲು ನಾನು ಈ ಚರ್ಚೆ ಕರ್ನಾಟಕಕ್ಕೆ ಅಭಿವೃದ್ಧಿ ತರುವ ರೀತಿಯಲ್ಲಿ ಪಕ್ವಾಶೀತವಾಗಿರಬೇಕು ಎಂದು ಮನವಿ ಮಾಡಿಕೊಂಡಿದ್ದೇನೆ.

SRI M. VEERAPPA MOILY.—It is an excellent gesture. Vijayanagara Steel Plant should not be a product of politics. It should be a product of vibrant economic and social fibre of this State. ಏಕೆಂದರೆ, ಇದೊಂದು ಆರ್ಥಿಕ ಅಭಿವೃದ್ಧಿಯ ಪ್ರಪೋಸಲ್ ಆದ್ದರಿಂದ ಇದನ್ನು ನಾವು ರಾಜಕೀಯ ಪ್ರಪೋಸಲ್ ಆಗಿ ಪರಿವರ್ತನೆ ಯಾವುದೇ ಸಂದರ್ಭದಲ್ಲಿ ಮಾಡಿದಾಗ ನಾವು ಕಾಣಬೇಕಾದಂಥ ಫಲಿತಾಂಶವನ್ನು ಇದರಲ್ಲಿ ಕಾಣುವುದಕ್ಕೆ ಬಹಳ ಕಷ್ಟವಾಗುತ್ತದೆ. ನಾನು ಇದರ ಬಗ್ಗೆ ಹೆಚ್ಚು ವಿವರಣೆ ಮಾಡಲಿಕ್ಕೆ ಹೋಗುವುದಿಲ್ಲ. ಪ್ರಾಜೆಕ್ಟ್‌ಗಳನ್ನು ಕಟ್ಟಿ ಅವಸರದಿಂದ ಅವುಗಳನ್ನು ತೆಗೆದುಕೊಂಡರೆ ಅವುಗಳ ಪರಿಣಾಮ ಏನಾಗುತ್ತದೆ ಎನ್ನುವುದನ್ನೂ ನಾನು ಹೇಳುವುದಕ್ಕೆ ಹೋದರೆ ಬಹುಶಃ ಇದು ತಮಗೆಲ್ಲರಿಗೂ ಗೊತ್ತಿದೆ. ಬೇರೆ ರಾಜ್ಯಗಳಿಗೆ ಇವುಗಳಿಂದ ಇಂಟರ್‌ಸ್ಟೇಟ್ ತೊಂದರೆಯಾಗಬಹುದು. ಅವರೂ ಕೂಡ ಇವುಗಳಿಗೆ ಆಕ್ಷೇಪಣೆ ಎತ್ತಬಹುದು, ಆದ್ದರಿಂದ ನಾವು ಇದನ್ನು ಬಹಳ ಸೂಕ್ಷ್ಮವಾಗಿ ಆಲೋಚನೆ ಮಾಡಬೇಕಾಗುತ್ತದೆ. It should not be an illegitimate child of the politics of the Chief Minister. We should not get a freak child. I do not think that anybody will be happy if we get a freak child. We want a full-fledged comprehensive Steel Plant. ಈ ಒಂದು ಹಿನ್ನೆಲೆಯಲ್ಲಿ, ಇದು ಏಶಿಯಾ ಖಿಂಡದಲ್ಲಿ ಬೃಹತ್ ಕೈಗಾರಿಕೆ. ಇದು ಕನ್ನಡಿಗರಿಗೆ ಸಿಕ್ಕಬೇಕು, ಕನ್ನಡ ನಾಡಿಗೆ ಇದು ಬರಬೇಕು ಎಂದು ಹೇಳುವುದು ನಮ್ಮೆಲ್ಲರ ಇಚ್ಛೆ. ಹೀಗಿರುವಾಗ ಇದರಲ್ಲಿ ರಾಜಕೀಯವನ್ನು ತಂದು, ಇದು ನಮ್ಮ ಪಕ್ಷದ ಒತ್ತಡ ಆಗಬಹುದು, ತಮ್ಮ ಪಕ್ಷದ ಒತ್ತಡ ಆಗಬಹುದು, ಈ ಒತ್ತಡದಿಂದ ನವಜಗೆ ಸಿಕ್ಕುವುದು ಫ್ರೀಕ್ ಚೈಲ್ಡ್. We do not want a freak child. We want a 'Steel Child'.

SRI MICHAEL FERNANDES.—It should not be still-born.

SRI M. VEERAPPA MOILY.—What I mean by this is, there should be economic compulsions for a project of this nature. ಇದು ಅತ್ಯಂತ ಅಗತ್ಯವಾದ ಜರೂರಾದ ವಿಚಾರ. ಇದಕ್ಕೆ ನಾನು ಎಲ್ಲಾ ಆಂಕಿಸಂಖ್ಯೆಗಳನ್ನು ಇಲ್ಲಿ ಕೊಡಲಿಕ್ಕಾಗುವುದಿಲ್ಲ. ಕೊಟ್ಟರೂ ಕೂಡ ನವಜಗೆ ಇಲ್ಲಿ ಸಾಕಷ್ಟು ಸಮಯ ಸಿಗಲಿಕ್ಕಿಲ್ಲ.

ಡಾ|| ಹೆಚ್.ಎಲ್. ತಿಮ್ಮೇಗೌಡ.—ಮಾನ್ಯ ವಿರೋಧಪಕ್ಷದ ನಾಯಕರು ಈ ವಿಷಯದಲ್ಲಿ ನಾವು ರಾಜಕೀಯ ಒತ್ತಡವನ್ನು ತರುವುದರಿಂದ ಫ್ರೀಕ್ ಚೈಲ್ಡ್ ಆಗಬಹುದು ಎನ್ನುವ ಮಾತನ್ನು ಹೇಳಿದರು. ನಾನು ಅದನ್ನು ಒಪ್ಪುತ್ತೇನೆ. ರಾಜಕೀಯ ಒತ್ತಡವನ್ನು ಹಾಕದೆ, ಕರ್ನಾಟಕಕ್ಕೆ ಆದಷ್ಟು ಜಾಗ್ರತೆ ವಿಜಯನಗರ ಉಕ್ಕಿನ ಕಾರ್ಖಾನೆ ಬರಬೇಕಾದರೆ ಏನು ಮಾಡಬೇಕು ಎನ್ನುವುದನ್ನು ತಾವು ಹೇಳಿಬಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಈ ವಿಷಯಕ್ಕೆ ರಾಜಕೀಯ ಒತ್ತಡ ಹಾಕಬಾರದು ಎಂದು ಹೇಳಲಿಲ್ಲ. Undue political pressure, motivated political pressure ಹಾಕುವುದರಿಂದ ಅಪಾಯವಾಗುತ್ತದೆ. ಈ ಒಂದು ವಿಚಾರ ಕಳೆದ ೧೨ ವರ್ಷಗಳಿಂದ ನಿಧಾನವಾಗುತ್ತಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿರುವಾಗ ಇದು ನಿಧಾನವಾಗುವುದು ಅಷ್ಟು ಸರಿಯಲ್ಲ. ಈ ವಿಷಯಕ್ಕೆ ರಾಜಕೀಯ ಒತ್ತಡ ಹಾಕಬಾರದು ಎಂದು ನಾನು ಹೇಳಲಿಲ್ಲ. ಆದರೆ ಅದು ಮೋಟಿವೇಟೆಡ್ ಆಗಬಾರದು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ವಿರೋಧಪಕ್ಷದ ನಾಯಕರು ರಾಜಕೀಯ ಒತ್ತಡ ಎಂದರೇನು ಎಂದು ಬಿಡಿಸಿ ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ತಾವು ಜ್ಞಾನದೇವರು, ತಮಗೆ ಎಲ್ಲಾ ಗೊತ್ತಿದೆ. ತಾವು ಜ್ಞಾನದೇವರು ಅಷ್ಟೇ ಅಲ್ಲ, ದೊಡ್ಡಮೇಟಿಯವರೂ ಹೌದು.

ಶ್ರೀ ಎಸ್.ಆರ್. ಬೊಮ್ಮಾಯಿ.—ವಿಜಯನಗರ ಉಕ್ಕಿನ ಕಾರ್ಖಾನೆ ರಾಜ್ಯಕ್ಕೆ ಬರುವುದರಲ್ಲಿ ಕನ್ನಡಿಗರಿಗೆ ಅನ್ಯಾಯವಾಗಿದೆ. ಆದಷ್ಟು ಬೇಗ ಇದು ಬರುವ ರೀತಿಯಲ್ಲಿ ಪಕ್ಷಾತೀತವಾದ ಚರ್ಚೆ, ಉನ್ನತ ಮಟ್ಟದ ಚರ್ಚೆ ಇಲ್ಲಿ ನಡೆಯಬೇಕು. ಅದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರೂ ಸಲಹೆ ಸೂಚನೆಗಳನ್ನು ಕೊಟ್ಟು ಮುಂದೆ ಏನು ಕ್ರಮ ಹಾಕಿಕೊಳ್ಳಬೇಕು ಎಂದು ಹೇಳಬೇಕು. ಸರ್ಕಾರ ಎಂದಾಗ ಈ ಸದನದ ಎಲ್ಲಾ ಸದಸ್ಯರು ಮತ್ತು ಕರ್ನಾಟಕ ಜನರ ಪ್ರತಿಕ್ರಿಯೆ ಏನು ಎಂದು ಜನ ಕಾದು ನೋಡುತ್ತಿದ್ದಾರೆ. ಎಲ್ಲರಿಗೂ ಇದರ ಮೇಲೆ ಉತ್ಕಟೇಚ್ಛೆ ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾನು ಈ ವಿಷಯದ ಬಗ್ಗೆ ಒಂದು ಸಲಹೆಯನ್ನು ಕೊಡುತ್ತೇನೆ. ವಿಜಯನಗರ ಉಕ್ಕಿನ ಕಾರ್ಖಾನೆ ನಮ್ಮ ರಾಜ್ಯಕ್ಕೆ ಕೊಡಬೇಕು ಎನ್ನುವುದರ ಬಗ್ಗೆ ನಾವು ಯಾರು ಇಲ್ಲಿ ರಾಜಕೀಯ ಭಾಷಣವನ್ನು ಮಾಡುವುದು ಬೇಡ. ಸರ್ವಾನುಮತದಿಂದ ನಾವೆಲ್ಲರೂ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸೋಣ. ಮಾನ್ಯ ಸದಸ್ಯರಾದ ರಾಮ್‌ದೇವ್ ಅವರು ಈ ವಿಷಯದ ಮೇಲೆ ಖಾಸಗಿ ನಿರ್ಣಯವನ್ನು ತಂದಿದ್ದಾರೆ. ಸರ್ಕಾರದವರೇ, ಆಡಳಿತ ಮಾಡತಕ್ಕವರೇ ಈ ವಿಷಯದ ಮೇಲೆ ಅಧಿಕೃತವಾದ ನಿರ್ಣಯವನ್ನು ಮಾಡಿ ಸದನದ ಎಲ್ಲಾ ಸದಸ್ಯರ ಸರ್ವಾನುಮತದ ಅಭಿಪ್ರಾಯವನ್ನು ತೆಗೆದುಕೊಂಡು ಪಾರ್ಲಿಮೆಂಟ್ ಸದಸ್ಯರ ಅನುಮತಿಯನ್ನು ಪಡೆದು ಕೇಂದ್ರ ಸರ್ಕಾರಕ್ಕೆ ಕಳುಹಿಸೋಣ. ಹಿಂದೆ ಈ ರೀತಿಯಾದಂಥ ನಿರ್ಣಯವನ್ನು ಮಾಡಿದುದು ನನಗೆ ನೆನಪಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮುಹಾಜನ್ ಕಮಿಷನ್ ಬಗ್ಗೆ ಇಂಥ ಒಂದು ನಿರ್ಣಯವನ್ನು ಮಾಡಲಾಗಿತ್ತು.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಈ ತರಹ ನಿರ್ಣಯ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈ ವಿಷಯದ ಬಗ್ಗೆ ಸರ್ಕಾರದವರು ಒಂದು ಅಧಿಕೃತವಾದ ನಿರ್ಣಯವನ್ನು ತೆಗೆದುಕೊಂಡು ಬನ್ನಿ. ಇದರಲ್ಲಿ ಯಾವುದೇ ರಾಜಕೀಯ ಬೇಡ.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ೧೯೭೨ ರಿಂದಲೂ ಹೇಳುತ್ತಿದ್ದೇವೆ. ಮುಖ್ಯವಾಗಿ ಚುನಾವಣೆಗಳು ಹತ್ತಿರ ಬಂದಾಗ ಇದರ ಬಗ್ಗೆ ಹೆಚ್ಚಿನ ಮಾತುಕತೆಗಳನ್ನು ಕೇಂದ್ರದ ಹಾಗೂ ರಾಜ್ಯದ ಪ್ರಮುಖರು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆ. ೧೯೭೨ರಲ್ಲಿಯೇ ಇದರ ಶಿಲಾನ್ಯಾಸವನ್ನು ರಾಷ್ಟ್ರದ ಪ್ರಧಾನಿಯವರು ಹಾಕಿದ ನಂತರ ಸತತವಾಗಿ ಕಾಂಗ್ರೆಸ್ (ಐ) ಸರ್ಕಾರವೇ ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿದ್ದು, ಇದರಲ್ಲಿ ಯಾರೂ ರಾಜಕೀಯವಾಗಿ ಪ್ರವೇಶ ಮಾಡುವ ಹಾಗೆ ಇರಲಿಲ್ಲ. ಬೇರೆ ಪಕ್ಷಗಳವರು ವಿರೋಧಿ ಪಕ್ಷಗಳಲ್ಲಿದ್ದು ಅವರು ರಾಜಕೀಯ ಮಾಡಿದ ಪ್ರಶ್ನೆ ಉದ್ಭವವಾಗುವುದಿಲ್ಲ. ಇದರಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಯಾವುದೇ ರಾಜಕಾರಣ ಮಾಡದೆ, ರಾಜ್ಯಕ್ಕೆ ಉಕ್ಕಿನ ಕಾರ್ಖಾನೆ ಬರುವಂತೆ ಉತ್ತಮ ಸಲಹೆಯನ್ನು ಕೊಟ್ಟು, ಅದಕ್ಕೆ ಸದನದ ಎಲ್ಲಾ ಸದಸ್ಯರ ಒಪ್ಪಿಗೆಯನ್ನು ಪಡೆಯಲಿ. ಇದರಲ್ಲಿ ನನ್ನ ಸಲಹೆ ಏನೆಂದರೆ ತಾವು ಯಾವ ಸಲಹೆಯನ್ನು ಕೊಡುತ್ತೀರೋ ಅದಕ್ಕೆ ನಾವು ನಿಮ್ಮ ಜೊತೆಯಲ್ಲಿ ಬರುವುದಕ್ಕೆ ಸದಾ ಸಿದ್ಧರಿದ್ದೇವೆ.

ಶ್ರೀ ಪಿ. ರಾಂದೇವ್.—ಡಿಸೆಂಬರ್ ೧೬ನೇ ತಾರೀಖು, ತಿಂಗಳ ಕೊನೆಯಲ್ಲಿ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದರ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದೆಂದು ಹೇಳಿದ್ದಾರೆ.

ಈಗಾಗಲೇ ತಿಂಗಳು ಮುಗಿದು ಹೋಳಿಕೆ ಮಾತ್ರ ಹಾಗೆಯೇ ಉಳಿದಿದೆ. ದಯವಾಡಿ ಎಲ್ಲಾ ಪಕ್ಷಗಳ ಡೆಲಿಗೇಷನ್ ಅನ್ನು ತೆಗೆದುಕೊಂಡು ದೆಹಲಿಗೆ ಹೋಗುವ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇದು ಕೇಂದ್ರ ಸರ್ಕಾರದವರು ಮಾಡಬೇಕಾದ ಕೆಲಸ. ರಾಜ್ಯದಲ್ಲಿ ನಾವು ಏನು ಸಲಹೆ ಕೊಟ್ಟರೂ ಆದರಿಂದ ಏನು ಪ್ರಯೋಜನವಾಗುತ್ತದೆ ? ಇಡೀ ರಾಜ್ಯದ ಜನತೆ ಇದರ ಬಗ್ಗೆ ಒಮ್ಮತವಾದ ಒಂದು ಒತ್ತಾಯದ ನಿರ್ಣಯಕ್ಕೆ ಬಂದರೆ ಮಾತ್ರ ಇದು ಸಾಧ್ಯವಾಗುತ್ತದೆ. ಈ ಸರ್ಕಾರ ಹೊಸದಾಗಿ ಬಂದಿದೆ, ಇವರು ಎಷ್ಟೇ ಒತ್ತಾಯ ಮಾಡಿದರು, ಕೇಂದ್ರ ಸರ್ಕಾರದವರು ಉಕ್ಕಿನ ಕಾರ್ಖಾನೆಯನ್ನು ರಾಜ್ಯಕ್ಕೆ ಕೊಡದಿದ್ದರೆ ಏನು ಮಾಡಬೇಕು ? ಅದಕ್ಕೋಸ್ಕರ ಮಾನ್ಯ ವಿರೋಧ ಪಕ್ಷದ ನಾಯಕರು ಯಾವ ರೀತಿಯ ಒತ್ತಾಯವನ್ನು ಕೇಂದ್ರ ಸರ್ಕಾರಕ್ಕೆ ಹಾಕಬೇಕು ಎನ್ನುವುದನ್ನು ತಿಳಿಸಬೇಕು. ಒಟ್ಟಿನಲ್ಲಿ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಿರುವಾಗ ಇಂತಹ ಒಂದು ಬೃಹತ್ ಪ್ರಮಾಣದ ಕಾರ್ಖಾನೆ ರಾಜ್ಯಕ್ಕೆ ಬೇಕೇ ಬೇಕು. ಇದು ಕರ್ನಾಟಕ ಜನತೆಯ ಹಕ್ಕು ಎನ್ನುವ ರೀತಿಯಲ್ಲಿ ವಿಚಾರವನ್ನು ತೆಗೆದುಕೊಂಡರೆ ಸಾಧ್ಯವೇ ಹೊರತು ಹಿಂದಿನದೆಲ್ಲವನ್ನೂ ಮಾತನಾಡಿದರೆ ಏನು ಪ್ರಯೋಜನ ? ಅದು ಎಲ್ಲರಿಗೂ ಗೊತ್ತಿದೆ.

೪-೦೦ ಪಿ.ಎಂ.

(ಶ್ರೀ ಗೋವಿಂದ ಗೌಡರು ಅಧ್ಯಕ್ಷ ಪೀಠದಲ್ಲಿದ್ದರು)

ಈಗ ಇರತಕ್ಕ ಮುಖ್ಯಮಂತ್ರಿಗಳು ಸಭೆ ಕರೆದಿದ್ದರು. ಆ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ವೀರಪ್ಪ ಮೊಯ್ಲಿಯವರು ತಜ್ಞರ ವರದಿ ಬರಬೇಕು. ನಂತರ ಇದರ ಬಗ್ಗೆ ಆಲೋಚನೆ ಮಾಡಬಹುದೆಂದು ಹೇಳಿದ್ದರು. ಇವತ್ತು ಕರ್ನಾಟಕ ಜನತೆಯ ಹಿತದೃಷ್ಟಿಯಿಂದ ಈ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಮಾಡಿ ಕರ್ನಾಟಕ ರಾಜ್ಯಕ್ಕೆ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಕೊಟ್ಟೇ ಕೊಡಬೇಕೆಂದು ಹೋರಾಟ ಮಾಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ವೀರಪ್ಪ ಮೊಯ್ಲಿಯವರು ೭೦ ಭಾಗ ಒಪ್ಪಿಕೊಂಡಿದ್ದಾರೆ. ಖಾಸಗಿ ನಿರ್ಣಯ ಒಂದು ಕಡೆ ಇರಲಿ. ಮಾನ್ಯ ಮೊಯ್ಲಿಯವರು ಒಪ್ಪಿಕೊಂಡರೆ ರಾಜ್ಯದ ದೃಷ್ಟಿಯಿಂದ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕಾರ ಮಾಡಿ ಕೇಂದ್ರಕ್ಕೆ ಕಳುಹಿಸೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರುಗಳು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದಾರೆ. ಮಾನ್ಯ ಮೊಯ್ಲಿಯವರು ಕೂಡ ಅದಕ್ಕೆ ವಿರೋಧ ಮಾಡುವುದಿಲ್ಲವೆಂದು ಅಂದುಕೊಂಡಿದ್ದೇನೆ. ಖಾಸಗೀ ನಿರ್ಣಯ ಬೇಡ. ಸರ್ಕಾರೀ ನಿರ್ಣಯ ತನ್ನಿ ಎಲ್ಲರೂ ಒಪ್ಪಿಕೊಳ್ಳೋಣ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮಾತನಾಡುತ್ತಾ ಸ್ವಲ್ಪ ರಾಜಕೀಯ ಬೆರಸಿ ಮಾತನಾಡಿದರು. ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರ ಕಳೆದ ಮೂವತ್ತೈರಡು ವರ್ಷಗಳಿಂದ ಇದ್ದರೂ ಈ ಒಂದು ಕಾರ್ಖಾನೆಯನ್ನು ಏತಕ್ಕೆ ಮಾಡಲಿಲ್ಲವೆಂದು ಕೇಳಿದರು. ಇದು ನೂರಾರು ಕೋಟಿ ರೂಪಾಯಿಗಳ ಯೋಜನೆ ಕೇಂದ್ರ ಸರ್ಕಾರವೇ ಮಾಡುವುದೂ ಕಷ್ಟ, ಬರೀ ರಾಜ್ಯ ಸರ್ಕಾರದ ಸಂಪನ್ಮೂಲದಿಂದಲೂಕೂಡ ಮಾಡುವುದು ಕಷ್ಟ. ಕಾಂಗ್ರೆಸ್ ಸರ್ಕಾರ ಇದ್ದಾಗ ಆಗಲಿಲ್ಲ. ೧೯೭೭ರಿಂದ ಎರಡು ವರ್ಷಗಳ ಕಾಲ ಜನತಾ ಪಕ್ಷದ ಸರ್ಕಾರ ಇದ್ದಾಗ ಕೇಂದ್ರದ ಬಡ್ಜೆಟ್ಟಿನಲ್ಲಿ ಒಂದು ಕಾಸೂ ಕೂಡ ಈ ಯೋಜನೆಗೆ ಇಡಲಿಲ್ಲ...

(ಗೊಂದಲ)

ಮಾನ್ಯ ಸದಸ್ಯರು.—೩೨ ವರ್ಷಗಳಿಂದ ಏತಕ್ಕೆ ಮಾಡಲಿಲ್ಲ, ಎರಡು ವರ್ಷದಲ್ಲಿ ಜನತಾ ಪಕ್ಷದ ಸರ್ಕಾರ ಏನು ತಾನೆ ಮಾಡುವುದಕ್ಕಾಗುತ್ತಿತ್ತು ?

(ಗೊಂದಲ)

ಶ್ರೀ ಪಿ. ರಾಂದೇವ್.—ಅಲ್ಲಿ ಜನತಾ ಪಕ್ಷದ ಸರ್ಕಾರ ಇದ್ದಾಗ, ಇಲ್ಲಿ ಜನತಾ ಪಕ್ಷದ ಸರ್ಕಾರ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಯಾರು ಮಂತ್ರಿಗಳಾದರೂ ಮಾಡುವುದಕ್ಕಾಗುವುದಿಲ್ಲ. ಹೆಚ್ಚು ಆಂದರೆ ಒತ್ತಡ ತರಬಹುದು. ನಿರ್ದಿಷ್ಟವಾದ ಹಣವನ್ನು ಕೇಂದ್ರದ ಬಡ್ಜೆಟ್‌ನಲ್ಲಿ ಇಡದಹೊರತು ಯಾವ ಪಕ್ಷದ ಸರ್ಕಾರ ಇದ್ದರೂ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ. ರಾಂದೇವ್.—ಈ ವಿಚಾರದಲ್ಲಿ ಜನತೆಯ ಶಕ್ತಿಯನ್ನು ಬಡಿದೆಬ್ಬಿಸುವಂಥ ಕೆಲಸ ಮಾಡಬೇಕು. ಕನ್ನಡಿಗರು ದೌರ್ಬಲ್ಯವಂತರಲ್ಲ ಎನ್ನುವುದನ್ನು ತೋರಿಸಿಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಜನತೆಯ ಬೆಂಬಲ ಇದಕ್ಕೆ ಅವಶ್ಯಕ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ಬೊಮ್ಮಾಯಿಯವರು ಮಾನ್ಯ ಮುಖ್ಯ ಮಂತ್ರಿಯವರ ಜೊತೆಯಲ್ಲಿ ಮಾತನಾಡಿ ಹಿಂದು ಸರ್ಕಾರಿ ನಿರ್ಣಯವನ್ನು ತರಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸುಮಾರು ೭೫ನೇ ಇಸವಿಯಿಂದಲೂ ಹೊರಗಡೆ ಇದ್ದು ಕೊಂಡು ನೋಡುತ್ತಿದ್ದೇವೆ. ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತೆನ್ನುವಂತೆ ಕರ್ನಾಟಕದ ಜನತೆಯ ಕನಸಾದ ಈ ವಿಜಯನಗರ ಉಕ್ಕಿನ ಕಾರ್ಖಾನೆಗೆ ಇದುವರೆವಿಗೂ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಇನ್ನು ಮುಂದಾದರೂ ಮಾನ್ಯ ಮೊಯ್ಲಿಯವರು ಪ್ರಾಮಾಣಿಕ ಪ್ರಯತ್ನ ಮಾಡುವರೆ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ೧೯೭೧ರಲ್ಲಿ ಆಗಿನ ಪರಿಸ್ಥಿತಿಗೆ ಅನುಗುಣವಾಗಿ ಯಾವ ಒಂದು ವಿಜ್ಞಾನ ಹಾಗೂ ತಂತ್ರವನ್ನು ವಿಜಯನಗರ ಉಕ್ಕಿನ ಕಾರ್ಖಾನೆಗೆ ಉಪಯೋಗ ಮಾಡಬೇಕಾಗಿತ್ತೋ ಈಗ ಆಂಥ ಒಂದು ಪರಿಸ್ಥಿತಿ ಇಲ್ಲ. ಇತ್ತೀಚಿನ ದಿನಗಳಲ್ಲಿ ಸ್ಟೀಲ್ ಟೆಕ್ನಾಲಜಿಯಲ್ಲಿ ವೇಗವಾಗಿ ಬದಲಾವಣೆಯಾಗಿದೆ. ಇದನ್ನು ಎಲ್ಲರೂ ಒಪ್ಪುತ್ತಾರೆ. ಆಗಿನ ವರದಿಯಲ್ಲಿ ಯಾವ ಒಂದು ಆಧಾರದಿಂದ ತಯಾರು ಮಾಡಿದರು ಎನ್ನುವುದನ್ನು ಸಂಕ್ಷೇಪಣೆ ಮಾಡಿದರು. ಜನಗಳ ಮನಸ್ಸಿನಲ್ಲಿ ಏನು ಬಂದಿದೆ ಆಂದರೆ, ಯಾವ ಕಾರ್ಯಕ್ರಮವನ್ನೂ ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ ತೆಗೆದುಕೊಂಡಿಲ್ಲ ಎನ್ನುವ ಭಾವನೆ ಬಂದಿದೆ. ಇದಕ್ಕೆ ನಾವೆಲ್ಲರೂ ಕಾರಣರು ಎಂದು ಹೇಳಿದರೆ ತಪ್ಪಾಗಲಾರದು.

ವಾಸ್ತವಿಕವಾಗಿ ೧೯೭೧ನೇ ಇಸ್ವಿಯಿಂದ ೧೯೭೪–೭೫ನೇ ಇಸವಿಯವರೆಗೆ ಇನ್‌ಫ್ರಾಸ್ಟ್ರಕ್ಚರ್ ರೆಡಿಯಾಗಿ ೬ ಸಾವಿರ ಎಕರೆ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಬೇಕು ಎನ್ನುತಕ್ಕ ಉದ್ದೇಶವನ್ನಿಟ್ಟು ಕೊಂಡು ಆದರಲ್ಲಿ ೪,೬೦೦ ಎಕರೆ ಜಾಗವನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ಇಲ್ಲಿಯವರೆಗೆ ೯ ಕೋಟಿ ರೂ.ಗಳನ್ನು ಜಾಗವನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೋಸ್ಕರವಾಗಿಯೇ ಖರ್ಚು ಮಾಡಿದ್ದಾರೆ. ಕೇಂದ್ರ ಸರ್ಕಾರದವರಿಗೆ ಬರೀ ಶಂಕುಸ್ಥಾಪನೆ ಮಾಡಬೇಕು ಎನ್ನುತಕ್ಕ ಉದ್ದೇಶವಿದ್ದರೆ ಆವರು ಇಷ್ಟು ಖರ್ಚು ಮಾಡಿ ಇಷ್ಟು ಜಾಗವನ್ನು ಸ್ವಾಧೀನಪಡಿಸಿಕೊಳ್ಳುತಕ್ಕ ಪ್ರಮೇಯವಿರುತ್ತಿರಲಿಲ್ಲ. ಆದುದರಿಂದ ಆವರಲ್ಲಿ ಪ್ರಾಮಾಣಿಕವಾಗಿ ಈ ಕಾರ್ಖಾನೆಯನ್ನು ಮಾಡಬೇಕು ಎನ್ನತಕ್ಕ ಉದ್ದೇಶವಿದ್ದುದರಿಂದಲೇ ಇಷ್ಟು ಕೆಲಸವನ್ನು ಮಾಡಿದ್ದಾರೆ. ಅದೇ ಒಂದು ಸಣ್ಣ ಕೈಗಾರಿಕೆಯನ್ನು ಮಾಡಬೇಕು ಎಂದಾಗ ಹಬ್ಬಳ್ಳಿ–ಧಾರವಾಡ ರಸ್ತೆಯಲ್ಲಿ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಬೇಕಾದರೆ ೪–೫ ವರ್ಷ ಬೇಕಾಯಿತು. ಅದೂ ಕೇವಲ ೨೦೦,೩೦೦ ಎಕರೆ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲು ೪–೫ ವರ್ಷಗಳು ಹಿಡಿಯಿತು. ಆಂದಮೇಲೆ ಇಷ್ಟು ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಾದರೆ ಎಷ್ಟು ಕಷ್ಟಪಟ್ಟಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರದವರಿಗೆ ಈ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಮಾಡಲೇ ಬೇಕು ಎನ್ನತಕ್ಕದರ ಬಗ್ಗೆ ಆಸಕ್ತಿ, ಕಳಕಳಿ ಖಂಡಿತವಾಗಿಯೂ ಇತ್ತು. ಆದಕ್ಕಾಗಿಯೇ ಕೇಂದ್ರ ಸರ್ಕಾರದವರು ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೆಂಟ್ರಿಲ್ ಸೆಕ್ಟಾರ್‌ನಲ್ಲಿ ವಿಜಯ ನಗರ ಸ್ಟೀಲ್‌ಗೆ ೧೨೫ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದರು. ಬಹುಶಃ ಇದನ್ನು ಮಾಡಲೇಬಾರದು ಎನ್ನುವ ಉದ್ದೇಶವಿದ್ದಿದ್ದರೆ ೧೨೫ ಕೋಟಿ ರೂಪಾಯಿಗಳನ್ನು ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಇಡಬೇಕಾದಂಥ ಪ್ರಸಂಗ ಬರುತ್ತಲೇ ಇರಲಿಲ್ಲ. ಆದರೆ ನಾವು ಇಲ್ಲಿ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಅವಸರದಲ್ಲಿ ಮರೆತು ಬಿಡುತ್ತೇವೆ; ಇದು ನಡೆದಿದೆ. ಇಡೀ ಪ್ರಪಂಚದಾದ್ಯತ ರಿಶಿಷನ್ ಆದ ನಂತರ ೫೦ಗ್ಲೋರಿನವರು ಶೋರ್ ಬೇಸ್ಡ್ ಸ್ಟೀಲ್ ಪ್ಲಾಂಟ್‌ನ್ನು ಪ್ರಾರಂಭ ಮಾಡಿರುವ ಹಾಗೆ ಎಲ್ಲಾ ರಾಷ್ಟ್ರಗಳವರೂ ಪ್ರಾರಂಭ ಮಾಡಿದರು. ೧೯೭೭ರಲ್ಲಿ ಅಕಸ್ಮಾತ್ತಾಗಿಯೋ ಅಥವಾ ಯಾವ ಕಾರಣಕ್ಕಾಗಿಯೋ ಆಗ ಜನತಾ ಪಕ್ಷದವರು ಅಧಿಕಾರದಲ್ಲಿರುವಾಗ ಒಂದು ವಿತ್ತಂಡವಾದ ಪ್ರಾರಂಭವಾಯಿತು…

ಡಾ।। ಎಂ. ಪಿ. ಕರ್ಕಿ.—೧೨೫ ಕೋಟಿ ರೂ.ಗಳನ್ನು ಆಗ ನೀವು ಖರ್ಚು ಮಾಡಿದಿರೋ?...

ಶ್ರೀ ಎಂ. ವೀರಪ್ಪ ಮೊಯ್ಲಿ.—ರಿಷಿಪನ್ ಪ್ರಾರಂಭವಾದುದರಿಂದ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದಿಟ್ಟ ಹಣವನ್ನು ಖರ್ಚು ಮಾಡಲಿಕ್ಕೆ ಆಗಲಿಲ್ಲ. ಅನಂತರ ಜನತಾ ಪಕ್ಷ ಅಧಿಕಾರಕ್ಕೆ ಬಂದ ಕೂಡಲೇ ನಮ್ಮ ಸರ್ಕಾರವಿದ್ದಾಗ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಣ ತೆಗೆದಿಟ್ಟ ಈ ಕೆಲಸವನ್ನು ಪೂರ್ಣಮಾಡಬೇಕೆಂದು ಎನು ಇದ್ದರೋ ಆ ಕೆಲಸದ ವೇಗ ಇವರಿಂದ ಕುಂಠಿತವಾಯಿತು. ಇದಕ್ಕೆ ಕಾರಣವೇನೆಂದರೆ...They have introduced the so called rolling plan. ಎರಡು ಕಾರಣದಿಂದ ಈ ವಿಜಯನಗರ ಸ್ಟೀಲ್ ಪ್ಲಾಂಟ್ ತಡವಾಗುವುದಕ್ಕೆ ಕಾರಣವಾಯಿತು. ಮೊದಲನೆಯದಾಗಿ, ರಿಷಿಪನ್ ಆದದ್ದು, ಎರಡನೆಯದಾಗಿ, ಜನತಾ ಪಕ್ಷದವರು ರೋಲಿಂಗ್ ಪ್ಲಾನ್‌ನನ್ನು ಜಾರಿಗೆ ತಂದದ್ದು. ಈ ಎರಡು ಕಾರಣದಿಂದ ತಡವಾಯಿತೆಂದು ಸೂಕ್ಷ್ಮವಾಗಿ ಹೇಳುತ್ತಿದ್ದೇನೆ ಇದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ.

ಒಬ್ಬ ಸದಸ್ಯರು.—ಈ ಎರಡು ಕಾರಣಗಳ ಜೊತೆಗೆ ಇನ್ನೊಂದು ಕಾರಣವಿದೆ, ಅದು ಏನೆಂದರೆ ತುರ್ತು ಪರಿಸ್ಥಿತಿಯಲ್ಲಿ ನಿರಪರಾಧಿಗಳನ್ನು ಹಿಡಿದು ಶಿಕ್ಷೆ ಮಾಡಿದಿರಿ, ಅದು ಒಂದು ಕಾರಣವೆಂಬುದನ್ನು ಹೇಳಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—೧೯೮೦ನೇ ಇಸ್ವಿಯಲ್ಲಿ ಏನು ಮಾಡಿದ್ದೀರಿ ಎಂಬುದನ್ನೆಲ್ಲಾ ಹೇಳುವುದಕ್ಕೆ ಬೇರೆ ವೇದಿಕೆ ಇದೆ. ವಿಜಯನಗರ ಸ್ಟೀಲ್ ಪ್ಲಾಂಟ್ ಇಡೀ ಕರ್ನಾಟಕ ಜನತೆಗೇ ಅನ್ವಯಿಸುವುದಾದ್ದರಿಂದ ನಾವು ಇಷ್ಟತ್ತು ರಾಜಕೀಯ ಬಿಟ್ಟು ಚರ್ಚೆ ಮಾಡೋಣ. ಬರೀ ರಾಜಕೀಯದ ಬಗ್ಗೆ ಮಾತನಾಡುವ ಹಾಗಿದ್ದರೆ ಅದಕ್ಕೆ ಬೇರೆ ವೇದಿಕೆ ಇದೆ. ರಾಜಕೀಯ ಅಸ್ತ್ರವನ್ನು ಉಪಯೋಗಿಸುವುದಾದರೆ ನಮ್ಮಲ್ಲೂ ಸಹ ಅಸ್ತ್ರವಿದೆ...

ಶ್ರೀ ಮೈಕೆಲ್ ಬಿ. ಫರ್ನಾಂಡೀಸ್.—ಮಾನ್ಯ ವೀರಪ್ಪ ಮೊಯ್ಲಿಯವರು ಎರಡು ಕಾರಣಗಳನ್ನು ಕೊಟ್ಟರು. ಆದರೆ ಇದೇ ಸಮಯದಲ್ಲಿ ನಮ್ಮ ಭಾರತ ದೇಶದಲ್ಲಿರುವ ಬಿಲಾಯ್, ರೂರ್‌ಕೆಲಾ, ದುರ್ಗಾಪುರ್, ಬೊರಾಕೊ ಸ್ಟೀಲ್ ಪ್ಲಾಂಟ್‌ನ ೪ ದೊಡ್ಡ ದೊಡ್ಡ ಕಾರ್ಖಾನೆಗಳ ಶಂಕುಸ್ಥಾಪನೆಯಾಗಿ ಅವು ೪-೫ ವರ್ಷದಲ್ಲಿಯೇ, ಉತ್ಪಾದನೆಯನ್ನು ಪ್ರಾರಂಭ ಮಾಡಿದವು. ಆದರೆ ಇದರ ಶಂಕು ಸ್ಥಾಪನೆಯಾಗಿ ಇಷ್ಟು ವರ್ಷಗಳು ಕಳೆದರೂ ಏತಕ್ಕೆ ಪ್ರಾರಂಭವಾಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಮ್ಮ ಮೈಕೆಲ್ ಫರ್ನಾಂಡೀಸ್‌ರವರು ನಮ್ಮ ಊರಿನವರು. ಅವರು ನಮ್ಮ ಮಂಗಳೂರಿನಲ್ಲಿಯೂ ಒಂದು ಸ್ಟೀಲ್ ಪ್ಲಾಂಟ್ ಆಗಬೇಕೆಂದು ಪ್ರಯತ್ನ ಪಟ್ಟರು... ಅವರು ನಮ್ಮ ಸ್ನೇಹಿತರು, ಈ ಸ್ನೇಹಿತತ್ವ ಕೆಲವು ಸಾರಿ...

ಶ್ರೀ ಮೈಕೆಲ್ ಬಿ. ಫರ್ನಾಂಡೀಸ್.—೧೯೭೧ನೇ ಇಸವಿಯಲ್ಲಿ ಇದು ಶಂಕು ಸ್ಥಾಪನೆಯಾದದ್ದು, ೧೯೭೭ರವರೆಗೂ ಕಾಂಗ್ರೇಸ್ ಸರ್ಕಾರವೇ ಇರಲಿಲ್ಲವೇ ? ಅಲ್ಲಿಯವರೆಗೆ ಏತಕ್ಕೆ ಏನೂ ಮಾಡಲಿಲ್ಲ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದಕ್ಕೂ ಬರುತ್ತೇನೆ. ೧೯೭೭ರಲ್ಲಿ ಜನತಾ ಪಕ್ಷದವರಿಂದ ರೋಲಿಂಗ್ ಪ್ಲಾನ್ ಬಂತು. ಈ ರೋಲಿಂಗ್ ಪ್ಲಾನ್‌ನಿಂದ ನಮ್ಮ ರಾಷ್ಟ್ರದ ಅನೇಕ ಕಾರ್ಯಕ್ರಮಗಳು ಆ ರೋಲ್‌ನಲ್ಲಿ ಸುತ್ತಿಕೊಂಡು ಹೋಯಿತು. ಸುತ್ತಿ ಸುತ್ತಿಕೊಂಡು ಎಲ್ಲಿಗೆ ಬಂತು ಎಂದರೆ ನಮ್ಮ ವಿಜಯನಗರ ಸ್ಟೀಲ್ ಪ್ಲಾಂಟ್ ಮಂಗಳೂರು ಕಡಲ ತೀರಕ್ಕೆ ಬಂತು....

ಶ್ರೀ ಮೈಕಲ್ ಬಿ. ಫರ್ನಾಂಡೀಸ್.—೧೯೭೧ನೇ ಇಸ್ವಿಯಿಂದ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಮಧ್ಯೆ ಮಧ್ಯೆ ಮಾತನಾಡುತ್ತಿರುವುದರಿಂದ ಅವರೇ ಮಾತನಾಡಲಿ ನಾನು ಆಮೇಲೆ ಮಾತನಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಗಮನ ಕೊಡಬೇಕು. ಇಷ್ಟತ್ತು ರೋಲಿಂಗ್ ಪ್ಲಾನ್ ಮಾಡಿದ್ದರಿಂದ ವಿಜಯನಗರ ಸ್ಟೀಲ್ ಪ್ಲಾಂಟ್ ಉರುಳಿಕೊಂಡು ಹೋಗಿ ಮಂಗಳೂರಿನಲ್ಲಿ ಬಿತ್ತು...

ಡಾ।। ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಮೊಯ್ಲಿಯವರು ಮಾನ್ಯ ಬಂಗಾರಪ್ಪನವರು ರಾಜಕೀಯ ಮಾಡುವುದು ಬೇಡ ಎಂದು ಮತ್ತೆ ಅವರೇ ರಾಜಕೀಯ ಮಾಡುತ್ತಾ ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮೈಕಲ್ ಫರ್ನಾಂಡಿಸ್‌ರವರಿಗೆ ಹೇಳಿ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಅವರು ಹೇಳಿದ ವಿಚಾರಗಳನ್ನೇ ನಾನು ಪ್ರತಿಕ್ರಿಯೆಯಲ್ಲಿ ಹೇಳುತ್ತಾ ಇರುವುದು.

ಶ್ರೀ ಎಸ್. ಸೂರ್ಯನಾರಾಯಣರಾವ್.—೧೯೭೧ ರಿಂದ ಏನೇನಾಯಿತು ಎನ್ನುತಕ್ಕ ವಿಚಾರ ಹೇಳಿ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—೧೯೮೦ನೇ ಇಸವಿಯಲ್ಲಿ ಏನಾಯಿತು ? ಮಾನ್ಯ ಮೊಯ್ಲಿಯವರು ಇದುಫೈನಾನ್ಸ್ ಮಿನಿಸ್ಟರ್ ಆಗಿದ್ದಾಗ ೧೯೮೦ನೇ ಇಸವಿಯಲ್ಲಿ ಪ್ರಥಮ ಬಡ್ಜೆಟ್‌ನಲ್ಲಿ ಇದು ಪುನಃ ಶುರುವಾಗುತ್ತದೆ ಎಂದು ಹೇಳಿದರು. ೧೯೮೧ನೇ ಬಡ್ಜೆಟ್‌ನಲ್ಲಿ ಸ್ವಲ್ಪ ಕಷ್ಟವಾಗುತ್ತದೆ ಎಂದು ಹೇಳಿದರು. ೧೯೮೨ನೇ ಇಸವಿಯ ಬಡ್ಜೆಜ್‌ನಲ್ಲಿ ಅದರ ಬಗ್ಗೆ ಒಂದು ಅಕ್ಷರ ಕೂಡ ಇಲ್ಲ. ಈ ಮೂರು ವರ್ಷಗಳಲ್ಲಿ ಏನಾಯಿತು ಎನ್ನುವುದನ್ನು ಹೇಳಿ. ಕೇಂದ್ರ ಸರ್ಕಾರದವರು ೩೦ ಕೋಟಿ ರೂಪಾಯಿಗಳನ್ನು ಕೊಟ್ಟರು ಎಂದು ಇಲ್ಲಿ ರೆಸಲ್ಯೂಷನ್ ಪಾಸ್ ಮಾಡಿದರು. ಅದು ಸುಳ್ಳಾಗಿ ಹೋಯಿತು.

ಶ್ರೀ ಎಸ್. ಬಂಗಾರಪ್ಪ.—ರೋಲ್ ಬಿಡುವುದಕ್ಕೆ ೩ ವರ್ಷ ಹೋಯಿತು.

ಡಾ।। ಹೆಚ್. ಎಲ್. ತಿಮ್ಮೇಗೌಡ.—ಎಲ್ಲಾ ಪಕ್ಷದವರೂ ಸೇರಿ ಒಮ್ಮತದಿಂದ ರೆಸಲ್ಯೂಷನ್ ಪಾಸ್ ಮಾಡೋಣ. ೧೯೭೧ರಿಂದ ೧೯೭೫ರವರೆಗೆ ಏತಕ್ಕೋಸ್ಕರ ಆಗಲಿಲ್ಲ ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ. ಮತ್ತು ೧೯೭೭ರಿಂದ ೧೯೭೯ರವರೆಗೆ ಜನತಾ ಸರ್ಕಾರ ಇದ್ದಾಗ ಏನಾಯಿತು ಎಂದು ಕೇಳುವುದು ಬೇಡ. ಎಲ್ಲಾ ಬಿಟ್ಟು ಈಗ ಏನು ಮಾಡಬೇಕು ಎಂದು ಹೇಳಿ, ಯಾರೂ ರಾಜಕೀಯ ಬೆಳೆಸುವುದು ಬೇಡ. ಹಿಂದೆ ಆಗಿರುವುದು ಬೇಡ. ಜನತಾ ಸರ್ಕಾರ ಇದ್ದಾಗ ಆಗಿರುವುದು ಬೇಡ, ೧೯೮೦ರಿಂದ ೧೯೮೩ರವರೆಗೆ ಆಗಿರುವುದು ಬೇಡ. ಒಮ್ಮತದ ನಿರ್ಣಯ ಮಾಡುವುದಾದರೆ ಮಾಡೋಣ. ಬರೀ ರಾಜಕೀಯ ಮಾತನಾಡುವುದಾದರೆ ಮಾತನಾಡೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಬೇಕಾದರೆ ಕಡತ ತೆಗೆದು ನೋಡಬಹುದು. ರಾಜಕೀಯ ತರುವುದಕ್ಕೆ ನನಗೆ ಮನಸ್ಸು ಇರಲಿಲ್ಲ. ಆದರೆ ನನ್ನ ಮಿತ್ರರಾದ ಮೈಕಲ್ ಫರ್ನಾಂಡಿಸ್‌ರವರಿಗೂ ನಮಗೂ ಹೋರ್ ಬೇಸ್ಡ್ ಸ್ಟೀಲ್ ಪ್ಲಾಂಟ್ ಬರಬೇಕು ಎಂದು ಕಾಮನ್ ಇಂಟರೆಸ್ಟ್ ಇದೆ. ಕೆಲವು ಸಾರಿ ಸ್ನೇಹ ಕೂಡ ಕೆಟ್ಟದ್ದು. ಆಗ ಸ್ಟೀಲ್ ಮಿನಿಸ್ಟರ್ ಆಗಿದ್ದ ಬಿಜುಪಟ್ನಾಯಿಕ್ ಅವರಿಗೆ ಒಂದು ಪ್ರಾಜೆಕ್ಟ್ ಅಂದರೆ ಪ್ರದೀಪ ಸ್ಟೀಲ್ ಪ್ಲಾಂಟ್ ಬರಬೇಕಾಗಿತ್ತು. ಅವರವರ ರಾಜ್ಯಕ್ಕೆ ಒಂದೊಂದು ಪ್ರಾಜೆಕ್ಟ್ ಬರಬೇಕು ಎನ್ನುವುದು ತಪ್ಪೇನಲ್ಲ. ಪಾಟ್ನಾಯಿಕ್‌ರವರು ದೊಡ್ಡ ತಪ್ಪು ಮಾಡಿದರು ಎಂದು ಹೇಳುವುದಿಲ್ಲ ಮತ್ತು ಮಾಜಿ ಕೈಗಾರಿಕಾ ಮಂತ್ರಿಗಳಾದ ಜಾರ್ಜ್ ಫರ್ನಾಂಡಿಸ್‌ರವರು ಮಂಗಳೂರಿನಲ್ಲಿ ಹೋರ್ ರೇಸ್ಟ್ ಪ್ಲಾಂಟ್ ಮಾಡೋಣ ಎಂದೂ ಪಾಟ್ನಾಯಿಕ್‌ರವರು ಪ್ರದೀಪ ಸ್ಟೀಲ್ ಪ್ಲಾಂಟ್ ಮಾಡೋಣ ಎಂದೂ ಪ್ರಯತ್ನ ಮಾಡಿದ್ದರಿಂದ ಅವೆರಡರ ಮಧ್ಯೆ ಈ ವಿಜಯನಗರ ಸ್ಟೀಲ್ ಪ್ಲಾಂಟ್ ಕಂದರದಲ್ಲಿ ಬಿದ್ದು ಮುಳುಗಿ ಹೋಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ರಾಜಕೀಯ ಭಾಷಣ ಮಾಡುವುದಿಲ್ಲ ಎಂದು ಹೇಳಿದಿರಿ, ಮಾಡುತ್ತಿದ್ದೀರಿ, ಆದೇ ರೀತಿ ನಾವೂ ಹೋಗಬೇಕಾಗುತ್ತದೆ. ಹಿಂದೆ ನಿಜಲಿಂಗಪ್ಪನವರು ಇದ್ದರು, ಕಾಮರಾಜ್‌ರವರು ಇದ್ದರು, ಮಾನ್ಯ ದೇವರಾಜ ಅರಸ್‌ರವರು ಬಂದರು. ಬೇರೆ ಬೇರೆ ರಾಜ್ಯಗಳಲ್ಲಿ ಯಾರ್ಯಾರು ಮುಖ್ಯ ಮಂತ್ರಿಗಳಾಗಿದ್ದರೋ ಅವರ ಪ್ರಭಾವ, ಸ್ನೇಹ—ಇದೆಲ್ಲಾ ಚರ್ಚೆ ಮಾಡುತ್ತಾ ಹೋದರೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ಕೆಲವು ಸಾರಿ ಸ್ನೇಹದಿಂದ ಪ್ರಯೋಜನ ಬೀಳುತ್ತದೆ. ಸ್ನೇಹಿತರಿಗೆ ಚೆನ್ನಾಗಿರಬಹುದು, ಕೆಲವು ಸಾರಿ ಸಮಾಜಕ್ಕೆ ಕೆಟ್ಟದ್ದು ಆಗಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೇರೆ ಬೇರೆ ರಾಜ್ಯಗಳವರು ಪಡೆದುಕೊಂಡರು. ತಮಿಳು ನಾಡಿನವರು ಪಡೆದುಕೊಂಡರು. ಆಂಧ್ರ, ಒರಿಸ್ಸದವರು ಪಡೆದುಕೊಂಡರು. ಆದರೆ ನಾವು ಮಾತ್ರ

ಪಡೆದುಕೊಂಡಿಲ್ಲ. ಇದೇ ಕಾಲಕ್ಕೆ ಪ್ರಾರಂಭವಾದಂಥ ಯೋಜನೆಗಳು ಬೇರೆ ಬೇರೆ ರಾಜ್ಯಗಳಲ್ಲಿ ಕಾರ್ಯರೂಪಕ್ಕೆ ಬಂದಿವೆ. ಆದರೆ ವಿಜಯನಗರ ಸ್ಟೀಲ್ ಪ್ಲಾಂಟ್ ಒಂದೇ ಆಗದೇ ಇರುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಲ್ಲಾ ಪ್ರಾಜೆಕ್ಟ್‌ಗಳ ಬಗ್ಗೆ ಸಾಕಷ್ಟು ಕತೆ ಇರಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ರಾಜಕೀಯ ಬೇಡ ಎಂದು ಹೇಳುತ್ತಾ ಇದ್ದೇನೆ. ನೀವು ಆ ಕಡೆಗೆ ಹೋಗುತ್ತಾ ಇದ್ದೀರಿ. ವಿಜಯನಗರ ಕಾರ್ಖಾನೆ ಪ್ರಾರಂಭ ಆದಾಗ ಸೇಲಂದೂ ಪ್ರಾರಂಭವಾಯಿತು, ಅದೇ ರೀತಿ ವಿಶಾಖಪಟ್ಟಣದೂ ಒಂದೇ ಕಾಲಕ್ಕೆ ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ವಿಜಯನಗರ ಕಾರ್ಖಾನೆಗೆ ಸೀಮಿತಗೊಳಿಸಿ. ಸ್ನೇಹದ ವಿಚಾರ ಬಂದರೆ ಸಾಕಷ್ಟು ವಿಚಾರ ಇದೆ. ಈಗ ವಿಜಯನಗರದ ಬಗ್ಗೆ ಸೀಮಿತಗೊಳಿಸೋಣ. ರಾಜ್ಯದ ಹಿತಾಸಕ್ತಿಯನ್ನು ಬಲಿಕೊಟ್ಟಂಥ ಅನೇಕ ವಿಚಾರಗಳನ್ನು ಈಗ ಬಯಲಿಗೆ ಎಳೆದರೆ ಸಾಕಷ್ಟು ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ರಾಜಕೀಯ ಮಾಡುವುದಿಲ್ಲ ಎಂದು ಹೇಳಿ ರಾಜಕೀಯ ಮಾಡುತ್ತಿದ್ದಿರಿ. ಅದರಿಂದ ನನಗೆ ಬೇಜಾರಾಗುತ್ತಿದೆ. ನಾನು ಪ್ರಾರಂಭದಲ್ಲಿ ಮನವಿ ಮಾಡಿಕೊಂಡೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ನಮಗೆ ರಾಜಕೀಯ ಬೇಡ ಎಂದು ಹೇಳಿದಿರಿ, ಅದೇ ರೀತಿ ನಿಮ್ಮ ಸಹೋದರರಿಗೆ ಹೇಳಿ, ವಿಜಯನಗರಕ್ಕೆ ಮಾತ್ರ ಕೇಂದ್ರೀಕೃತವಾಗಲಿಕ್ಕೆ ಹೇಳಿ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ರೋಲಿಂಗ್ ಪ್ಲಾಂಟ್ ಬಗ್ಗೆ ಯಾರು ಮಾತನಾಡಿದ್ದು.

Sri M. Veerappa Moily.—You have introduced the rolling plan.

ಶ್ರೀ ಎಸ್. ಸೂರ್ಯನಾರಾಯಣರಾವ್.—ಆಮೇಲೆ ಬೇಕಾದರೆ ಮಾತನಾಡಿಕೊಳ್ಳಿ. ಈಗ ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ ಮಾತನಾಡೋಣ.

Sri M. Veerappa Moily.—Rolling plan concept was introduced by the Janata Government. It is there. You never believed on the concept of five-year plan.

ಶ್ರೀ ಎಸ್. ಆರ್. ಬೊಮ್ಮಾಯಿ.—ರೋಲಿಂಗ್ ಪ್ಲಾಂಟ್ ಬಗ್ಗೆ ಮಾತನಾಡಿದರೆ ನಮ್ಮ ದೃಷ್ಟಿಯಿಂದ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ರೋಲಿಂಗ್ ಪ್ಲಾಂಟ್‌ನಲ್ಲಿ ವಿಜಯನಗರ ಸ್ಟೀಲ್ ಪ್ಲಾಂಟ್ ಆಹುತಿಯಾಗಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ರಾಜಕೀಯ. ಚರ್ಚೆ ಈ ರೀತಿ ಹೋದರೆ ಲಾಭ ಆಗುವುದಿಲ್ಲ. ಈ ರೀತಿ ರಾಜಕೀಯ ಭಾಷಣ ಮಾಡುವುದಕ್ಕಿಂತ ಅವರು ನಿನ್ನೆ ಸಲಹೆ ಮಾಡಿದ್ದಾರೆ. ಆ ಸಲಹೆ ಪ್ರಕಾರ ವಿರೋಧಪಕ್ಷದ ಎಲ್ಲಾ ನಾಯಕರನ್ನು ಕರೆಯುತ್ತೇನೆ. ಮತ್ತು ಬೇರೆ ಬೇರೆ ಪಕ್ಷದ ಮುಖಂಡರನ್ನು ಕರೆಯುತ್ತೇನೆ, ಕರೆದು ಯಾವ ರೀತಿಯಿಂದ ಸರ್ಕಾರ ನಿರ್ಣಯ ತರಬೇಕು ಎನ್ನುವುದನ್ನು ಚರ್ಚೆ ಮಾಡೋಣ. ಹಿಂದೆ ಮಾಡಿದಂತೆ ನಿರ್ಣಯ ಮಾಡುವುದು ಬೇಡ. ಒಮ್ಮತದ ನಿರ್ಣಯ ಮಾಡಿದ ಮೇಲೆ ಅದನ್ನು ಕಾರ್ಯರೂಪಕ್ಕೆ ತರತಕ್ಕಂಥಾದ್ದನ್ನೂ ಕೂಡ ಅದರಲ್ಲಿ ಸೇರ್ಪಡೆ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಿಂದೆ ನಿರ್ಣಯ ಮಾಡಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಭಿನಂದನೆ ಮಾಡಿದ್ದಾರೆ. ಟೆಲೆಕ್ಸ್‌ನಲ್ಲಿ ೩೦ ಲಕ್ಷ ಇರುವುದು ೩೦ ಕೋಟಿ ಎಂದು ಬಂತು, ಕೇಂದ್ರ ಸರ್ಕಾರದಿಂದ ಆ ರೀತಿ ತಪ್ಪು ತಿಳಿವಳಿಕೆ ಬಂದಿತ್ತು.

ಶ್ರೀ ಎಸ್. ಬಂಗಾರಪ್ಪ.—ಟೆಲೆಕ್ಸ್ ಮೆನೇಜ್ ೩೦ ಕೋಟಿ ಎಂದು ಬಂತು, ಆಗ ಕೇಂದ್ರ ಸರ್ಕಾರಕ್ಕೆ ಸೂಚನೆ ಕೊಡತಕ್ಕ ಸರ್ವಾನುಮತದ ನಿರ್ಣಯ ಆಯಿತು ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಆಗಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಗ ನಾನು ಹೇಳಿದೆ. ಅದು ೩೦ ಕೋಟಿ ಆಗಲಿಕ್ಕೆ ಸಾಧ್ಯವಿಲ್ಲ, ಕೇಂದ್ರಸರ್ಕಾರದೊಡನೆ ಏಚಿತವಾಗಿ, ಸರಿಯಾಗಿ ತಿಳಿದುಕೊಂಡು ಮಾಡೋಣ, ಆತುರ ಮಾಡುವುದು ಬೇಡ ಎಂದು ಹೇಳಿದ್ದೆ. ಆದರೂ ನಿರ್ಣಯ ಮಾಡಬೇಕು ಎಂದು ಹೇಳಿದರು, ಮಾಡಿದ್ದೇವೆ. ಈಗ ಆ ರೀತಿ ನಿರ್ಣಯ ಆಗುವುದು ಬೇಡ, ತಾವು ಹೇಳಿದ ಚರ್ಚೆ ಮಾಡಿ ಒಂದು ನಿರ್ಣಯ ತೆಗೆದುಕೊಂಡು ಬರುತ್ತೇವೆ. ಮತ್ತು ಆ ನಿರ್ಣಯಕ್ಕೆ ಚಾಲನೆ ಕೊಡತಕ್ಕ ಕಾರ್ಯಕ್ರಮ ಬೇಕು. ಅದನ್ನು ನಾವು ನೀವು ಎಲ್ಲಾ ಕೂಡಿ ಯಾವರೀತಿ ಮಾಡಬೇಕು ಎನ್ನುವುದನ್ನು ಮಾಡೋಣ ಎಂದು ನಾನು ಕಳಕಳಿಯಿಂದ ಹೇಳುತ್ತಾ ಇದ್ದೇನೆ. ಈಗ ಚರ್ಚೆ ಮಾಡುತ್ತಾ ಹೇಳಿದಹಾಗೆ, ತಪ್ಪು ಯಾರದೇ ಇರಲಿ, ಅನೇಕ ಕಾರಣಗಳು ಇರಬಹುದು. ಆದರೆ ಒಂದು ವಿಚಾರ ಮಾತ್ರ ಹೇಳುತ್ತೇನೆ. ರಾಜ್ಯ ಸರ್ಕಾರದಲ್ಲಿ ಯಾರೇ ಮುಖ್ಯ ಮಂತ್ರಿಗಳಾಗಿರಲಿ ಈ ಕಾರ್ಖಾನೆಯನ್ನು ತರಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಅದು ಕಾರ್ಯಗತವಾಗದಿರುವುದಕ್ಕೆ ಅನೇಕ ಕಾರಣಗಳಿವೆ. ಅದನ್ನು ವಿಶ್ಲೇಷಣೆ ಮಾಡುವುದಕ್ಕೆ ಹೊರಟರೆ ಅನೇಕ ವಿಚಾರಗಳು ಬರುತ್ತವೆ. ನಾವು ಏನು ಮಾಡಬೇಕು ಅಂದರೆ ಈ ಕಾರ್ಖಾನೆ ಬೇಗ ಪ್ರಾರಂಭವಾಗುವುದಕ್ಕೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದು ಬಹಳ ಪ್ರಮುಖವಾದುದು. ಆದುದರಿಂದ ಈ ಬಗ್ಗೆ ನಿಮ್ಮೆಲ್ಲರ ಜೊತೆಯಲ್ಲಿ ಚರ್ಚೆ ಮಾಡಿ ನಿರ್ಣಯ ತರಲಿಕ್ಕೆ ಪ್ರಯತ್ನ ಮಾಡುತ್ತೇವೆ.

೪-೩೦ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ,...

ಶ್ರೀ ಎಸ್. ಸೂರ್ಯನಾರಾಯಣರಾವ್.— ಸರ್ಕಾರದವರೇ ತರುತ್ತೇವೆಂದು ಹೇಳುವಾಗ ಪುನಃ ಅದರ ಬಗ್ಗೆ ಮಾತನಾಡುತ್ತೇನೆ ಎಂದು ಹೇಳುವುದರಲ್ಲಿ ಅರ್ಥ ಏನು?

ಶ್ರೀ ಮೈಕೇಲ್ ಫರ್ನಾಂಡಿಸ್.— ಮಾನ್ಯ ವಿರೋಧಪಕ್ಷದ ನಾಯಕರು ಸಂದೇಹದ ಪ್ರಶ್ನೆಯನ್ನು ಎತ್ತಿದ್ದಾರೆ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಮಂಗಳೂರಿನಲ್ಲಿ ಇರತಕ್ಕ ಶೋರ್ ಬೇಸ್ಡ್ ಸ್ಟೀಲ್ ಫ್ಯಾಕ್ಟರಿ ವಿಜಯನಗರ ಉಕ್ಕಿನ ಕಾರ್ಖಾನೆಯ ಬದಲಿಗೆ ಬಂದದ್ದಲ್ಲ. ಈ ಬಗ್ಗೆ ನನ್ನ ಅಣ್ಣನಾದ ಹಾಗೂ ಹಿಂದೆ ಕೇಂದ್ರದಲ್ಲಿ ಕೈಗಾರಿಕಾ ಮಂತ್ರಿಯಾಗಿದ್ದಂತಹ ಶ್ರೀಮಾನ್ ಜಾರ್ಜ್ ಫರ್ನಾಂಡಿಸ್‌ರವರ ಹತ್ತಿರ ಕೇಳಿದೆ. ಅದಕ್ಕವರು ಹೇಳಿದರು, ಆ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಕೈಗಾರಿಕಾ ಮಂತ್ರಿಗಳ ಒಂದು ಸಮ್ಮೇಳನ ನಡೆದಾಗ, ಇಂಗ್ಲೆಂಡಿನ ಸ್ಪೆಷಲ್ ಮಿನಿಸ್ಟ್ರಿಯವರು ಇವರ ಹತ್ತಿರ ಮಾತನಾಡುತ್ತಾ, What assistance we can give—ಅಂತ ಹೇಳಿದಾಗ ನಮಗೆ ಉಕ್ಕಿನ ಕಾರ್ಖಾನೆ ಮಾಡುವುದರಲ್ಲಿ ಬಹಳ ಅವಶ್ಯಕತೆ ಇದೆ, ಅಂತ ಹೇಳಿದಾಗ, We need Steel Mills, ಯಾವುದೇ ರೀತಿಯ ಕಂಟ್ರಾಕ್ಟ್, ಅಥವಾ ಖಾಸಗಿ ಕಂಪನಿಯವರು ಇದರಲ್ಲಿ ಬರದಿದ್ದರೆ, Government to Government aid basis ಮೇಲೆ ಶೋರ್ ಬೇಸ್ಡ್ ಸ್ಟೀಲ್ ಫ್ಯಾಕ್ಟರಿಯನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದಕ್ಕೆ ಮಂಗಳೂರಿನಲ್ಲಿ ಅದನ್ನು ಮಾಡುವುದಕ್ಕೆ ಸರಿಯಾದ ಸ್ಥಳವೆಂದು ಒಪ್ಪಿಕೊಂಡಿದ್ದರಿಂದ ಅವರೆ ಒಂದು ಟೀಮು ಬಂದು ಈ ಒಂದು ಪ್ರಾಜೆಕ್ಟನ್ನು ಪರಿಶೀಲನೆ ಮಾಡಿ, ಒಪ್ಪಿಕೊಂಡ ನಂತರ ಬಂದಿರತಕ್ಕಂತಹದ್ದು ಅದು ವಿಜಯನಗರ ಉಕ್ಕಿನ ಕಾರ್ಖಾನೆಯ ಬದಲಾಗಿ ಅಂತ ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ವಿಜಯನಗರ ಉಕ್ಕಿನ ಕಾರ್ಖಾನೆಗೆ ಖರ್ಚು ಮಾಡಿರುವ ಹಣವನ್ನು ವೈಯಕ್ತಿಕವಾಗಿ ಶ್ರೀಮತಿ ಇಂದಿರಾಗಾಂಧಿಯವರಿಂದ ವಸೂಲು ಮಾಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು There was a press statement.

(ಗೊಂದಲ)

ಆದ್ದರಿಂದ ಅದನ್ನು ಮಾತನಾಡಬೇಡಿ. ಅದಕ್ಕೆ ತಾವು ಅವಕಾಶ ಕೊಟ್ಟರೆ ನಾವು ಮಾತನಾಡ ಬೇಕಾಗುತ್ತದೆ. ಏಕೆಂದರೆ ಸಾಕಷ್ಟು ಹಿನ್ನೆಲೆ ನಿಮಗೂ ಇರಬಹುದು, ನಮಗೂ ಇರಬಹುದು.

ಆದ್ದರಿಂದ ಸನ್ಮಾನ್ಯ ಸಚಿವರು ಯಾವ ರೀತಿಯ ಸೂಚನೆಯನ್ನು ಕೊಟ್ಟಿದ್ದಾರೋ ಆ ರೀತಿ ಇದರ ಬಗ್ಗೆ ಆಲೋಚನೆ ಮಾಡೋಣ. ಏಕೆಂದರೆ ಇದರ ಬಗ್ಗೆ ಇರತಕ್ಕಂತಹ ಹಿನ್ನೆಲೆ, ಇತಿಹಾಸ ಚರಿತ್ರೆ ತೆಗೆದುಕೊಂಡರೆ, ಶ್ರೀಮಾನ್ ಮೈಕೆಲ್ ಫರ್ನಾಂಡಿಸ್ ಹೇಳಿದ್ದಕ್ಕೆ ಇನ್ನೇನಾದರೂ ನಾವು ಹೇಳ ಬೇಕಾಗುತ್ತದೆ. ಶ್ರೀಮಾನ್ ಮೈಕೆಲ್ ಫರ್ನಾಂಡಿಸ್‌ರವರು ಹೇಳಿದಂತೆ ನಮ್ಮ ಊರಿನಲ್ಲೂ ಆ ಕಾರ್ಖಾನೆಯಾಗುವುದರ ಜೊತೆ ಇವನ್ನು ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡೋಣ. ಎರಡನ್ನೂ ಸೇರಿಸಿಬಿಟ್ಟು ಕಾರ್ಖಾನೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಛೇರ್ಮನ್.—ರಾಜಕೀಯ ಬೆರೆಸದೆ ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ರಾಜಕೀಯದ ವಸ್ತುವಾಗಬೇಕಾಗಿಲ್ಲ. ಆದರೆ ಈ ಬಗ್ಗೆ ಇತ್ತೀಚೆಗೆ ನಡೆದಂತಹ ಕೆಲವು ವಿಚಾರಗಳನ್ನು ಸೂಕ್ಷ್ಮವಾಗಿ ಹೇಳಿಬಿಡುತ್ತೇನೆ. ೧೯೮೦ನೇ ಇಸವಿಯ ನಂತರ ನಾವು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ, ಇವರಿಗೆ ವಿವರವಾದ ಫ್ಲರದಿಯನ್ನು ಕೊಟ್ಟಿದ್ದೇವೆ. ೧೯೮೦ನೇ ಇಸವಿಯಿಂದ ಮೊನ್ನೆಯವರೆವಿಗೂ ಕೂಡ ಸಾಕಷ್ಟು ಚಟುವಟಿಕೆ, ಆದು ವಿಜಯನಗರ ಸ್ಟೀಲ್ ಪ್ಲಾಂಟ್‌ನ ಕನಸು ನೆನಸಾಗುವ ದಿಸೆಯಲ್ಲಿದೆ. ಇದಕ್ಕೆ ಈಗಿನ ಸರ್ಕಾರವೂ ಕಾರಣ. ಅದೇ ರೀತಿ ಹಿಂದಿನ ಸರ್ಕಾರವೂ ಕೂಡ ಕಾರಣ. ನನಗೆ ತಿಳಿದ ಮಟ್ಟಿಗೆ ಆ ಬಗ್ಗೆ ತೀರ್ಮಾನ ಮಾಡಿದ್ದಾರೆ. ಆದ್ದರಿಂದ ಹಿಂದೆ ಏನೂ ಕೆಲಸ ಮಾಡಲಿಲ್ಲ, ಈಗಿನ ಸರ್ಕಾರ ಮಾತ್ರ ಮಾಡಿದೆ ಅಂತ ಹೇಳತಕ್ಕಂತಹ ಉಲ್ಲೇಖ ಪ್ರಸ್ತುತ ಅಗತ್ಯ ಇಲ್ಲ ಅಂತ ಹೇಳುತ್ತೇನೆ ಅಷ್ಟೆ.

೧೯೮೦ರಿಂದ ಇಪತ್ತಿನವರೆಗೆ ಬಹಳ ಚಟುವಟಿಕೆ ನಡೆದಿದೆ. ಅದು ಕೈಗಾರಿಕಾ ಮಂತ್ರಿಗಳಾಗಿರು ವಂತಹ ಶ್ರೀಮಾನ್ ಬೊಮ್ಮಾಯಿಯವರಿಗೆ ಕೂಡ ಗೊತ್ತು. ಮೆಕ್ಕಾನ್‌ರವರು ಎರಡೆರಡು ಸಾರಿ ವರದಿಗಳನ್ನು ತರಿಸಿಕೊಂಡಿದ್ದಾರೆ. ಡಿಸೆಂಬರ್ ೧೯೮೨ರಂದು ಈ ಕೈಗಾರಿಕೆ ಆಗಲೇಬೇಕೆಂದು ಒಂದು ಕಂಪನಿ ರಿಜಿಸ್ಟರ್ ಆಯಿತು. ಒಂದು ವೇಳೆ ಈ ಕೈಗಾರಿಕೆಯ ಬಗ್ಗೆ ಇಚ್ಛೆ ಯಾರಿಗೂ ಅಂದರೆ ಕೇಂದ್ರ ಸರ್ಕಾರಕ್ಕೆ ಇಲ್ಲದಿದ್ದ ಪಕ್ಷದಲ್ಲಿ ಕಂಪನಿಯನ್ನು ಸ್ಥಾಪನೆ ಮಾಡತಕ್ಕ ಅವಶ್ಯಕತೆ ಇರಲಿಲ್ಲ. ೧೯೭೧ ರಲ್ಲಿ ಯಾವ ರೀತಿ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದವರು ವಿಜಯನಗರ ಕಂಪನಿಯನ್ನೂ ನೋಡಿ ಕೊಳ್ಳುತ್ತಿದ್ದರು. ಅದರಂತೆ ಇದಕ್ಕಾಗಿ ಮತ್ತೊಂದು ಕಂಪನಿಯನ್ನು ೧೯೮೨ರಲ್ಲಿ ನೋರೆದಾಯಿಸಿ ದ್ದಾರೆ. ೧೯೮೦ರಿಂದ ನಡೆದಂತಹ ಚಟುವಟಿಕೆಯೇ ಇದಕ್ಕೆ ಕಾರಣ. ಇದು ಒಂದು ತಂತ್ರಜ್ಞಾನ. ಉಕ್ಕಿನ ತಂತ್ರಜ್ಞಾನ ಬಹಳವಾಗಬೆಳೆದಿದೆ. ವಿಜಯನಗರ ಪ್ರದೆ ಶಂಕ್ಲಿ ಉಕ್ಕಿನ ಕಾರ್ಖಾನೆಯ ಬಗ್ಗೆ ವಾಸ್ತವಿಕವಾಗಿ ಸಾಕಷ್ಟು ಅನಾನುಕೂಲತೆಗಳು ಇವೆ. ಉತ್ತರ ಭಾರತದಲ್ಲಿರತಕ್ಕಂತಹ ಉತ್ತರಪ್ರದೇಶ ಹಾಗೂ ಬಿಹಾರ್ ಮುಂತಾದ ಜಡೆಗಳಲ್ಲಿ ಈ ರೀತಿಯ ಅನಾನುಕೂಲತೆ ಬಹಳ ಕಡಿಮೆ. ತಕ್ಷಣ ಇಂತಹ ಕೈಗಾರಿಕೆಯನ್ನು ಮಾಡುವುದಕ್ಕೆ ಸಾಕಷ್ಟು ಅವಕಾಶಗಳು ಇವೆ. ಆದ್ದರಿಂದ ಇದಕ್ಕೆ ಸಾಕಷ್ಟು ಹೊಸ ತಂತ್ರಜ್ಞಾನ ಅವಶ್ಯಕತೆ ಇದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸಂಗರೇಣಿ ಕಲ್ಲಿದ್ದಲನ್ನು ತರಿಸಬಹುದಲ್ಲಾ;

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಿಂಗರೇಣಿ ಕಲ್ಲಿದ್ದಲು, ಇದಕ್ಕೆ ಸೂಕ್ತವಾದ ಕಲ್ಲಿದ್ದಲು ಅಲ್ಲ. ಭಾರತದಲ್ಲಿರುವ ಅನೇಕ ಕೈಗಾರಿಕೆಗಳು ಬ್ಲಾಸ್ಟ್ ಫರ್‌ನೆಸ್ ಟೆಕ್ನಾಲಜಿ ಆಧಾರಿತ ಕೈಗಾರಿಕೆಗಳು ಎಂಬುದು ತಮಗೆ ಗೊತ್ತಿವೆ. ಆದ್ದರಿಂದ ಇಡೀ ವಿಶ್ವದಲ್ಲಿ ಬ್ಲಾಸ್ಟ್ ಫರ್‌ನೆಸ್ ಟೆಕ್ನಾಲಜಿಯನ್ನು ಉಪಯೋಗ ಮಾಡಿಕೊಂಡು ಮಾಡತಕ್ಕಂತಹ ಕಾರ್ಖಾನೆಗಳು ಎರಡೇ ಎರಡು. ಇಡೀ ವಿಶ್ವದಲ್ಲಿ Blast furnace technology has already become obsolete...ಒಂದು ದಕ್ಷಿಣ ಕೊರಿಯಾದಲ್ಲಿದೆ. ಮತ್ತೊಂದು ವಿಶಾಖಪಟ್ಟಣದಲ್ಲಿದೆ. ಇರತಕ್ಕ ಬ್ಲಾಸ್ಟ್ ಫರ್‌ನೆಸ್ ಟೆಕ್ನಾಲಜಿ ಆಧಾರವಾಗಿ ಕೆಲವು ಕೈಗಾರಿಕೆಗಳನ್ನು ಮಾಡಿದ್ದೇವೆಂದರೆ, ದೊಡ್ಡ ಬಿಳಿ ಆನೆಯನ್ನು ಸಾಕಿದ ಹಾಗೆ ಎನ್ನುವುದು ಒಂದು ಅಭಿಪ್ರಾಯ. ಆಸ್ಟ್ರಿಯಾದ ಡಾ।। ನಾರ್ಬರ್ಟ್‌ಸ್ ಟ್ಯಿಗರ್‌ರವರು ೭–೧೨–೮೩ ರಲ್ಲಿ ಇಲ್ಲಿಗೆ ಬಂದು ಸ್ಥಳವನ್ನು ನೋಡಿಕೊಂಡು ಒಂದು ಹೇಳಿಕೆಯನ್ನು ಕೊಟ್ಟಿವ್ವಾರೆ. ಇಷ್ಟರಲ್ಲೇ ವೆಸ್ಟ್ ಜರ್ಮನಿಯ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಕೆ.ಆರ್. ಪ್ರೊಸೆಸ್ ಟೆಕ್ನಾಲಜಿಯನ್ನು ಕಂಡು ಹಿಡಿದಿದಾರೆ. ಇದು ಲೇಟೆಸ್ಟ್ ಟೆಕ್ನಾಲಜಿ. ಅವರೇ ಹೆಳಿರತಕ್ಕ ರೀತಿಯಲ್ಲಿ ಅಲ್ಲಿರತಕ್ಕ ರಾ ಮೆಟೀರಿಯಲ್ಸ್ ಕೆ.ಆರ್. ಪ್ರೊ ಸಸ್‌ಗೆ ಅನ್ವಯ ಮಾಡುತ್ತಿದ್ದಾರೆ. ಈ ಬಗ್ಗೆ ಸುಮಾರು ೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕೇಂದ್ರ ಸರ್ಕಾರ ಇಂಡಿಯನ್ ರಾ ಮೆಟೀರಿ

ಯಲ್ಸ್‌ನ್ನು ವೆಸ್ಟ್ ಜರ್ಮನಿಗೆ ಕಳುಹಿಸಿದೆ. ಇದರ ಬಗ್ಗೆ ಇಂಟರ್‌ವ್ಯೂ ಪರದಿ ಕೂಡ ಬಂದಿದೆ. ಬಹುಶಃ ಮುಂದಿನ ತಿಂಗಳ ಮೊದಲ ವಾರದಲ್ಲಿ ಅಥವಾ ಈ ತಿಂಗಳ ಕೊನೆ ವಾರದಲ್ಲಿ ಅಂತಿಮ ವರದಿ ಬರುತ್ತದೆ. ನವೆಂಬರ್–ಡಿಸೆಂಬರ್ ೧೯೮೩ರಲ್ಲಿ ಇಂಟರ್‌ವ್ಯೂ ವರದಿ ಕೂಡ ಬಂದಿದ್ದು, ಅದರಲ್ಲಿ ಇಂಡಿಯನ್ ವೆಟರ್‌ರಿಯಲ್ಸ್‌ಗೆ ಅನುಕೂಲವಾಗಬಹುದೆಂದು ಬಂದಿದೆ. ಅದರ ಒಂದು ಅಂತಿಮ ವರದಿ, ಜನವರಿ ಕೊನೆ ವಾರದಲ್ಲಿ, ಅಥವಾ ಫೆಬ್ರುವರಿ ಮೊದಲವಾರದಲ್ಲಿ ಬಂದಾಗ, ಅಂತಿಮ ನಿರ್ಣಯವನ್ನು ಈ ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ತೆಗೆದುಕೊಳ್ಳುತ್ತಾರೆ. ಸಾಕಷ್ಟು ಸಚಿವರು ಕೇಂದ್ರ ಸರ್ಕಾರದ ಉಕ್ಕಿನ ಸಚಿವರು, ಹಣಕಾಸಿನ ಸಚಿವರು ಹಾಗೂ ಈ ದೇಶದ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಇದರ ಬಗ್ಗೆ ಮಾತನಾಡಿದ್ದೇನೆ. ಈ ಮಧ್ಯೆ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಯಲ್ಲಿ ರಾಜ್ಯದ ಲೋಕಸಭಾ ಸದಸ್ಯರು ಹಾಗೂ ವಿರೋಧಪಕ್ಷದ ನಾಯಕರುಗಳ ಸಭೆಯನ್ನು ಕರೆದಿದ್ದರು. ಆವಾಗ ನಾನು ಅವರಿಗೆ ಪತ್ರ ಬರೆದಿದ್ದೇನೆ. ಅಂತಿಮ ವರದಿ ಕೇಂದ್ರ ಸರ್ಕಾರಕ್ಕೆ ಬಂದ ಮೇಲೆ, ಎಲ್ಲರೂ ಒಮ್ಮತವಾಗಿ ಎಲ್ಲ ರಾಜಕೀಯ ಪಕ್ಷಗಳ ಒತ್ತಡವನ್ನು ಹಾಕಿದರೆ ಅದು ಯಶಸ್ವಿಯಾಗುತ್ತದೆ ಎಂಬ ವಿಚಾರವನ್ನು ತಿಳಿಸಿ ಪತ್ರವನ್ನು ಬರೆದಿದ್ದೇನೆ. ಆದರ ಪ್ರಕಾರ ಮೊನ್ನೆ ಅವರಿಗೆ ಕಾಗದವನ್ನು ಬರೆಯುವ ಮೊದಲು ನಮ್ಮ ರಾಜ್ಯದ ಲೋಕಸಭಾ ಸದಸ್ಯರ ಜೊತೆ, ಕೇಂದ್ರ ಉಕ್ಕಿನ ಸಚಿವರ ಜೊತೆ ಚರ್ಚೆ ಮಾಡಿದ್ದೇನೆ. ಆವರೂ ಕೂಡ ಈ ಕೈಗಾರಿಕೆಯನ್ನು ಮಾಡಬೇಕೆಂಬ ಇಚ್ಛೆ ಇದೆಯೇ ವಿನಃ ಮಾಡಬಾರದು ಎಂಬ ಇಚ್ಛೆ ಯಾರಿಗೂ ಇಲ್ಲವೆಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಇದು ಪ್ರಾಮುಖ್ಯವಾದುದು. ಕೇಂದ್ರ ಸರ್ಕಾರದ ಜೊತೆ ವಿಜಯನಗರದ ಸ್ಟೀಲ್ ಪ್ಲಾಂಟ್ ಬೇಕೇ ಬೇಡವೇ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ ಎಂದರು. ಆದರೆ ಕೇಂದ್ರ ಸರ್ಕಾರದ ವಿವೇಚನೆಯಲ್ಲಿ ಯಾವ ಲೇಟಿಸ್ಟ್ ಟೆಕ್ನಾಲಜಿಯನ್ನು ಮಾಡಬೇಕೆಂಬುದು ಇದೆಯೇ ಹೊರತು, ಇದು ಬೇಕೇ ಬೇಡವೇ ಎಂಬ ಮೂಲಭೂತ ಪ್ರಶ್ನೆ ಇಲ್ಲವೆಂದು ನನಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಹಾಗಿರತಕ್ಕ ಸಂದರ್ಭದಲ್ಲಿ ಅದು ಪ್ರೊಸೆಸ್ ಆಗಿ ಬಂದ ಕೂಡಲೇ ನೀವು ಏನು ನಿರ್ಣಯ ಮಾಡುತ್ತೀರೋ ಅದಕ್ಕೆ ನಾವೂ ಪಾಲುದಾರರಾಗುತ್ತೇವೆ. ವಿಜಯನಗರ ಸ್ಟೀಲ್ ಪ್ಲಾಂಟ್ ಕನ್ನಡಿಗರದ್ದು ಆಗಬೇಕು. ನಾವು ಆ ಒಂದು ಸ್ಥಾವರವನ್ನು ನಮ್ಮ ರಾಜ್ಯದಲ್ಲಿ ಸ್ಥಾಪನೆ ಮಾಡಿದಾಗ ಸಾವಿರಾರು ಜನರಿಗೆ ಕೆಲಸ ಕೊಡುವುದಕ್ಕಾಗುತ್ತದೆ. ತನ್ಮೂಲಕ ಕರ್ನಾಟಕ ರಾಜ್ಯದ ಒಂದು ಸಮಗ್ರ ನಕ್ಷೆಯಲ್ಲಿ ಸಿಂಹಪಾಲನ್ನು ನಾವು ಈ ಯೋಜನೆ ಮೂಲಕ ಕೊಡುವುದಕ್ಕೆ ಸಾಧ್ಯತೆ ಇದೆ ಎಂಬ ದೃಷ್ಟಿಯಿಂದ ಈ ವಿಚಾರಗಳನ್ನು ಸದನದ ಮುಂದಿಟ್ಟಿದ್ದೇವೆ. ಆದುದರಿಂದ ನಾನು ಏನಾದರೂ ರಾಜಕೀಯವಾಗಿ ಮಾತನಾಡಿದ್ದರೆ ತಪ್ಪಾಗಿ ತಿಳಿಯಬಾರದು. ಯಾವುದೇ ರೀತಿಯ ವಾದ ವಿವಾದಕ್ಕೆ ನಾವು ಹೋಗದೆ, ಯಾವ ರೀತಿಯಲ್ಲಿ ಈ ಪ್ರಾಜೆಕ್ಟನ್ನು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳಿಂದ ಹಿಡಿದು ಉಕ್ಕಿನ ಮಂತ್ರಿಗಳವರೆಗೆ ಮಾಡಬೇಕೆಂಬ ಸಂಕಲ್ಪ, ಹಠ ಮತ್ತು ಆ ದೃಷ್ಟಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡು ಹೋಗುತ್ತಿದ್ದಾರೊ ಅದಕ್ಕೆ ನಾವು ಹೆಚ್ಚು ಪ್ರೊತ್ಸಾಹ ಮತ್ತು ಬೆಂಬಲವನ್ನು ಸೂಚನೆ ಮಾಡುತ್ತೇವೆ. ಆದಷ್ಟು ಜಾಗ್ರತೆ ಈ ಕೈಗಾರಿಕೆ ಕರ್ನಾಟಕ ರಾಜ್ಯದಲ್ಲಿ ನಿಲ್ಲೋನಿಲ್ಲುಂತೆ ನಾವೆಲ್ಲ ಶ್ರಮಪಡೋಣ, ಕೇಂದ್ರ ಸರ್ಕಾರ ನಮಗೆ ಕೊಡಬೇಕಾದ ವಿದ್ಯುತ್ತನ್ನು ಕೊಡಬೇಕಾಗಿದೆ, ದೊಡ್ಡ ರೈಲ್ವೆ ಲೈನನ್ನು ಹಾಕಬೇಕಾಗಿದೆ. ಇದಕ್ಕೆಲ್ಲ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತದೆ. ಈಗ ನಾನು ಆ ವಿವರಗಳಿಗೆ ಹೋಗುವುದಿಲ್ಲ. ನಮ್ಮ ಸರ್ಕಾರ ಇರುವಾಗ ಬೇಕಾದಷ್ಟು ಗ್ರಾಜುಯೇಟ್ಸ್ ಮತ್ತು ಟೆಕ್ನಾಲಜಿಕಲ್ ಇನ್‌ಸ್ಟಿಟ್ಯೂಟ್‌ಗಳನ್ನು ಸ್ಥಾಪನೆ ಮಾಡಿದ್ದೆವು. ವಿಜಯನಗರದ ಸ್ಟೀಲ್ ಪ್ಲಾಂಟಿಗೆ ಬೇಕಾಗುವ ಇತರೆ ತಂತ್ರ ಜ್ಞಾನ ಒದಗಿಸತಕ್ಕ ಶಾಲಾ ಕಾಲೇಜುಗಳನ್ನು ಮಾಡಿದ್ದು ಇದೆ, ಅವೆಲ್ಲ ಇವತ್ತು ನಡೆಯುತ್ತಿವೆ. ಪೋಸ್ಟ್ ಗ್ರಾಜ್ಯುಯೇಟ್ ಸೆಂಟರ್ ಆದ ಮೇಲೆ ಗುಲ್ಬರ್ಗ ವಿಶ್ವವಿದ್ಯಾನಿಲಯ ಆಯಿತು. ಈ ದೃಷ್ಟಿಯಿಂದ ಒಮ್ಮತದಿಂದ ಕರ್ನಾಟಕ ರಾಜ್ಯಕ್ಕೆ ವಿಜಯನಗರ ಉಕ್ಕಿನ ಕಾರ್ಖಾನೆ ಬರಬೇಕೆಂದು ನಾವೆಲ್ಲ ಬೆಂಬಲವಾಗಿ ನಿಲ್ಲೋಣ. ಯಾವುದೇ ರೀತಿಯಲ್ಲಿ ಈ ಬಗ್ಗೆ ಸಣ್ಣ ಮಾತುಗಳನ್ನು ನಾವು ಯಾರೂ ಕೂಡ ಹೇಳತಕ್ಕ ಪ್ರವೃತ್ತಿಗೆ ಇಳಿಯದೆ ಇಷ್ಟು ದೊಡ್ಡ ಕೈಗಾರಿಕೆ ನಮ್ಮ ರಾಜ್ಯಕ್ಕೆ ಬರುವಾಗ ನಮ್ಮೆಲ್ಲರ ಹೃದಯ ವಿಶಾಲವಾಗಿ ಅದನ್ನು ಸ್ವಾಗತಿಸತಕ್ಕ ಒಂದು ಉತ್ತಮ ಸಂಸ್ಕೃತಿಯನ್ನು ನಾವೆಲ್ಲರೂ ಪ್ರದರ್ಶಿಸೋಣವೆಂದು ಪ್ರಾರ್ಥಿಸಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಕರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಚನ್ನಬಸವನಗೌಡ (ಕೂಡ್ಲಿಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮದೇವ್‌ರವರು ಏನು ನಿರ್ಣಯ ತಂದಿದ್ದಾರೆ ಅದಕ್ಕೆ ನಾನು ನನ್ನ ಸಂಪೂರ್ಣ ಬೆಂಬಲ ಕೊಟ್ಟು ಕೆಲವು ಮಾತು ಗಳನ್ನು ಆಡಬಯಸುತ್ತೇನೆ. ನಾನು ಬಳ್ಳಾರಿ ಜಿಲ್ಲೆಯವನು. ನಮ್ಮ ಜಿಲ್ಲೆಯ ಜನರೆಲ್ಲ ೧೯೭೧ರ ಜನವರಿಯಲ್ಲಿ ಅದರ ಶಂಕು ಸ್ಥಾಪನೆಯಾದಾಗ ಉಕ್ಕಿನ ಕಾರ್ಖಾನೆ ಬಂದಿದೆ, ಸಂಪತ್ತು ದೊರೆತಿದೆ ಎಂದು ಸಂತೋಷಪಡುತ್ತಿದ್ದರು. ೧೯೭೨ನೇ ಜನವರಿಯಲ್ಲಿ ನಡೆದ ಚುನಾವಣೆಯಲ್ಲಿ ಎಲ್ಲರೂ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಹಾಕಿ ಗೆಲ್ಲಿಸಿದರು. ಆದರೆ ಅದು ಇದುವರೆಗೆ ಬರಲಿಲ್ಲ. ಇದನ್ನು ದಸ್ತೂರ್ ಕಂಪನಿಗೆ ರೆಫರ್ ಮಾಡಿದರು. ಅವರು ಅದನ್ನು ಸ್ಥಾಪಿಸಲು ೩೦೦ ಕೋಟಿ.

ಶ್ರೀ ಎಂ. ವೀರಪ್ಪ ಮೊಯಿಲಿ.—೧೯೭೦ರಲ್ಲಿ ಶಂಕುಸ್ಥಾಪನೆಯಾಯಿತು ಎಂದು ಸಂತೋಷ ದಿಂದ ಕಾಲ ಕಳೆದೆವು. ಆಮೇಲೆ ಚುನಾವಣೆ ಮತ್ತೊಂದು ಮುಗದೊಂದು ಬಂದವು. ಇದರ ಬಗ್ಗೆ ರಾಜಕೀಯವಾಗಿ ಮಾತನಾಡಬೇಕೆಂದರೆ ದಿನಗಟ್ಟಲೆ ಮಾತನಾಡಬಹುದು, ಮಾತನಾಡೋಣ. ನಮಗೂ ದಾಖಲೆ ಪುರಾವೆಗಳು ಇವೆ. ಆದರೆ ಈಗ ಅದರ ಸ್ಥಾಪನೆಯ ಬಗ್ಗೆ ನಿಜವಾಗಿ ಚಿಂತನೆ ಮಾಡುವುದು ಒಳ್ಳೆಯದು.

ಶ್ರೀ ಚನ್ನಬಸವನಗೌಡ.—ರಾಜಕೀಯಕ್ಕೆ ನಾನು ಹೋಗುವುದಿಲ್ಲ, ರಾಜಕೀಯ ನಮಗೆ ಬೇಡ. ಕರ್ನಾಟಕದಲ್ಲಿ ಕನ್ನಡಿಗರು ತಪ್ಪು ಮಾಡಿದ್ದಾರೆ, ಇಲ್ಲವೆಂದು ಅಲ್ಲ. ತಪ್ಪು ಮಾಡಿದ್ದರೆ ಒಪ್ಪಿಕೊಳ್ಳ ಬೇಕು. ಅದನ್ನು ಮುಚ್ಚಿಟ್ಟುಕೊಳ್ಳುವುದರಿಂದ ಪ್ರಯೋಜನವಿಲ್ಲ. ಕೆಲವು ವರ್ಷಗಳ ನಂತರ ದಸ್ತೂರ್ ಕಂಪನಿಯಿಂದ ಇಂಗ್ಲೆಂಡಿನ ಸ್ಟೀಲ್ ಕನ್‌ಸ್ಟ್ರಕ್ಟೀವ್ ಕಮಿಟಿಗೆ ರೆಫರ್ ಮಾಡಿದರು. ಅದರ ರಿಪೋರ್ಟ್ ಬಂದ ಮೇಲೆ ಮಾಡುತ್ತೇವೆಂದರು. ಅವರ ವರದಿ ಪ್ರಕಾರ ಅದರ ವೆಚ್ಚ ೯೦೦ ಕೋಟಿ ರೂಪಾಯಿಗಳು ಎಂದು ಹೇಳಿದರು. ಅಲ್ಲಿ ಉತ್ಕೃಷ್ಟ ಕಬ್ಬಿಣದ ಅದಿರು ಸಿಗುತ್ತದೆಂದು ೬ ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡಿದರು. ಒಂದು ಉದ್ಯೋಗ ವಿನಿಮಯ ಕೇಂದ್ರ ವನ್ನು ತೆರೆದರು. ಉಕ್ಕಿನ ಕಾರ್ಖಾನೆಗೆ ಬೇಕಾದ ಸಿಬ್ಬಂದಿ ಕೊಡುವ ಸಲುವಾಗಿ ಆ ಕೇಂದ್ರ ಪ್ರಾರಂಭವಾಯಿತು. ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡರು. ಇವತ್ತಿನ ದಿವಸ ವಿಶಾಖಪಟ್ಟಣ ಮತ್ತು ಸೇಲಂನಲ್ಲಿ ಕಾರ್ಖಾನೆಗಳು ಪ್ರಾರಂಭವಾಗುತ್ತಿವೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಗ್ಗಟ್ಟಿನ ಕೊರತೆ ಎದ್ದು ಕಾಣುತ್ತದೆ. ಸ್ಟೀಲ್ ಕನ್‌ಸ್ಟ್ರಕ್ಟೀವ್ ಕಮಿಟಿಯ ರಿಪೋರ್ಟನ್ನು ತರಿಸುತ್ತೇವೆಂದರು. ಈಗ ಆದ ವೆಚ್ಚ ೩೦೦ ಕೋಟಿ ರೂಪಾಯಿ ಎಂದು ಅಂದಾಜು ಮಾಡಿರುತ್ತಾರೆ ಇನ್ನೂ ತರಿಸಿಲ್ಲಾ ಅವರೂ ಸಹ ಉತ್ಪ್ರೇಕ್ಷವಾದ ಕೆಲಸವಾಗಬೇಕೆಂದು ಹೇಳಿದರು. ಕಲ್ಲಿದ್ದಲು ದುಬಾರಿ ಆಗಬಹುದು, ಆದರೆ ಉಕ್ಕು ಚೆನ್ನಾಗಿ ಸಿಗುತ್ತದೆಂದು ಶಿಫಾರಸ್ಸು ಮಾಡಿದರು. ಆದರೂ ಒಗ್ಗಟ್ಟಿನಕೊರತೆಯಿಂದ ಆಗಲಿಲ್ಲ. ಈಗ ವಿರೋಧ ಪಕ್ಷದವರು ಮತ್ತು ಆಳುವ ಪಕ್ಷದವರು ಎಂಬ ಭೇದಭಾವವಿಲ್ಲದೆ ಒಮ್ಮತದಿಂದ ಉಕ್ಕಿನ ಕಾರ್ಖಾನೆ ಬರುವ ಹಾಗೆ ಮಾಡಬೇಕು. ಇಲ್ಲಿಂದ ಒಂದು ನಿಯೋಗ ಹೋಗಿ ಪ್ರಧಾನ ಮಂತ್ರಿಗಳ ಮೇಲೆ ಒತ್ತಾಯ ಮಾಡಬೇಕು ಒಪ್ಪಿಸಬೇಕು. ಈ ಒಂದು ಕಾರ್ಖಾನೆಯಾದರೆ ಸುಮಾರು ೫೦ ಸಾವಿರ ಜನರಿಗೆ ಉದ್ಯೋಗ ಸಿಗುತ್ತದೆ. ಮೊಯಿಲಿಯವರು ಹೇಳಿದ್ದು ನಿಜ. ಜನತಾ ಸರ್ಕಾರ ಬಂದಾಗ ಇದನ್ನು ಮುಂಗಳೂರಿಗೆ ಎಳೆಯಬೇಕೆಂದು ಪ್ರಯತ್ನ ಮಾಡಿದರು. ಆದರೂ ನಮಗೆ ಸಂತೋಷ, ಏಕೆಂದರೆ ಬಳ್ಳಾರಿಯಲ್ಲಿ ಆಗದಿದ್ದರೂ ಪರವಾಗಿಲ್ಲ, ಕರ್ನಾಟಕದಲ್ಲಿ ಎಲ್ಲಿಯಾದರೂ ಒಂದು ಕಡೆ ಆಗಲಿ ಎಂಬುದೇ ನಮ್ಮ ಉದ್ದೇಶ. ಬಳ್ಳಾರಿಯಲ್ಲಿ ಉತ್ಕೃಷ್ಟ ಉಕ್ಕು ಸಿಗುತ್ತದೆಂದು ತಜ್ಞರು ಅಭಿಪ್ರಾಯ ಪಟ್ಟಿರುವುದರಿಂದ ಅಲ್ಲಿ ಮಾಡುವುದು ಸೂಕ್ತ. ಸ್ಟೀಲ್ ಎಕ್ಸ್‌ಪರ್ಟ್ಸ್ ಕಮಿಟಿ ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ದಸ್ತೂರ್ ಕಂಪನಿಯವರು ಮತ್ತು ಸ್ಟೀಲ್ ಅಥಾರಿಟಿ ವರದಿ ಕೊಟ್ಟಿದ್ದಾರೆ. ಒಟ್ಟಿನಲ್ಲಿ, ನಾವೀಗ ಎಲ್ಲರೂ ಒಂದಾಗಿ ನಮ್ಮ ಕರ್ನಾಟಕ ರಾಜ್ಯಕ್ಕೆ ಉಕ್ಕಿನ ಕಾರ್ಖಾನೆ ಬರುವ ಹಾಗೆ ಮಾಡಿಕೊಳ್ಳ ಬೇಕೆಂದು ಹೇಳುತ್ತೇನೆ. ನಿಯೋಗ ಹೋಗುವುದಾದರೆ ಹೋಗಿ ಶ್ರೀಮತಿ ಇಂದಿರಾಗಾಂಧಿಯವರ ಮನಸ್ಸನ್ನು ಒಲಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸೂರ್ಯನಾರಾಯಣ ರಾವ್ (ವರ್ತೂರು).—ಮಾನ್ಯ ಅಧ್ಯಕ್ಷರೆ, ನಾನು ಹೊಸ ಪೇಟೆಗೆ ವಿದ್ಯಾವಂತ ಯುವಕರ ಸಮ್ಮೇಳನಕ್ಕೆ ಹೋಗಿದ್ದೆ. ಆಗ ಬಳ್ಳಾರಿ ಮೊತ್ತಿತರ ಕಡೆ ಬರೆದದ್ದು

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ವೆಂದು ಸೂಚಿಸುತ್ತದೆ.

ಒಂದೇ ಒಂದು ಘೋಷಣೆ. ಅದೇನೆಂದರೆ, 'ಉಕ್ಕಿನ ಕಾರ್ಖಾನೆ ಕರ್ನಾಟಕದ ಹಕ್ಕು'. ಅದು ಆಗಲೇ ಬೇಕು' ಎಂದು. ಅನೇಕ ಜನ ಯುವಕರು ಉಕ್ಕಿನ ಕಾರ್ಖಾನೆ ಬಂದರೆ ನಮಗೆ ಉದ್ಯೋಗ ದೊರೆಯುತ್ತದೆಂದು ನಂಬಿದ್ದಾರೆ. ಅಲ್ಲದೆ, ಅದರಿಂದ ನಮ್ಮ ರಾಜ್ಯದ ಅನೇಕ ಕೈಗಾರಿಕೆಗಳ ಬೆಳವಣಿಗೆಗೆ ಅನುಕೂಲವಾಗುತ್ತದೆ. ನಮ್ಮ ರಾಜ್ಯ ತಮಿಳ್ನಾಡಿಗೆ, ಮಹಾರಾಷ್ಟ್ರಕ್ಕೆ ಹೋಲಿಸಿದರೆ ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿದೆ. ಕೇಂದ್ರದ ಕೈಗಾರಿಕೆಗಳನ್ನು ಬಿಟ್ಟರೆ ನಮ್ಮ ರಾಜ್ಯದಲ್ಲಿ ಬೇರೆ ಕೈಗಾರಿಕೆಗಳು ಅಷ್ಟಾಗಿ ಇಲ್ಲ. ನಮ್ಮಲ್ಲಿ ಕಚ್ಚಾ ಪದಾರ್ಥಗಳು ಸಿಗುವಾಗ ಆ ಕಾರ್ಖಾನೆ ಆಗತ್ಕವಾಗಿ ಆಗಬೇಕು, ಮತ್ತು ಇದಕ್ಕೆ ಸಾರ್ವಜನಿಕರ ಮತ್ತು ಸರ್ಕಾರದ ಪ್ರಬಲ ಒತ್ತಡ ಬೇಕು. ಈ ಯೋಜನೆಗೆ ಕೇಂದ್ರ ಸರ್ಕಾರ ಹಣ ಒದಗಿಸಿಕೊಡದಿದ್ದರೆ ಕರ್ನಾಟಕದಲ್ಲಿ ಆಂದೋಳನವಾಗುತ್ತದೆಂದು ಅವರಿಗೆ ಗೊತ್ತಾಗದಿದ್ದರೆ ಕೇಂದ್ರ ಸರ್ಕಾರದ ಬಜೆಟ್ಟಿನಲ್ಲಿ ಹಣ ಇಡುವುದಿಲ್ಲ. ಹಿಂದೆ ಈ ಒಂದು ಯೋಜನೆಗಾಗಿ ಏನು ಒಂದು ಅಂದಾಜು ಇತ್ತೋ ಅದು ಈಗ ಜಾಸ್ತಿಯಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದವರು ಜಾಸ್ತಿ ಹಣ ಕೊಟ್ಟು ಕೈಗಾರಿಕೆ ಪ್ರಾರಂಭವಾಗುವುದಕ್ಕೆ ಅನುಕೂಲ ಮಾಡಿಕೊಡಬೇಕು. ಎಕ್ಸ್‌ಪರ್ಟ್ ಕಮಿಟಿ ರಿಪೋರ್ಟ್ ಸಹ ಬಂದಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿರತಕ್ಕವರು ಹಣ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ, ನಾನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪರವಾಗಿ ವಿರೋಧ ಪಕ್ಷದ ನಾಯಕರನ್ನು ಮತ್ತು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಇದರ ಬಗ್ಗೆ ಒಂದು ಒಮ್ಮತದ ತೀರ್ಮಾನ ಮಾಡಬೇಕು ಎಂದು. ಸೋಮವಾರವಾದರೆ ಸೋಮವಾರವೇ ಆ ನಿರ್ಣಯ ಕೈಗೊಳ್ಳಿ. ಜನತೆಗೆ ಪೂರ್ಣವಾಗಿ ಕರ್ನಾಟಕದ ಅಭ್ಯುದಯಕ್ಕಾಗಿ ಹೋರಾಡಬೇಕೆಂಬ ಮನಸ್ಸು ಬರಬೇಕು, ಹಳ್ಳಿಹಳ್ಳಿಗಳಲ್ಲಿ ಉಕ್ಕಿನ ಕಾರ್ಖಾನೆಗಾಗಿ ಹೋರಾಟ ಮಾಡತಕ್ಕ ಪರಿಸ್ಥಿತಿ ಬಂದರೆ ಕೇಂದ್ರ ಸರ್ಕಾರ ಇಷ್ಟು ದೊಡ್ಡ ಪ್ರಮಾಣದ ಬಜೆಟ್ಟನ್ನು ಕೊಡುವುದಕ್ಕೆ ಸಾಧ್ಯ.

ದಕ್ಷಿಣ ಭಾರತದ ಏಳಿಗೆ ವಿಷಯದಲ್ಲಿ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ನಮ್ಮ ಕರ್ನಾಟಕದಿಂದ ಲೋಕಸಭೆಗೆ ಆಯ್ಕೆಯಾಗಿ ಹೋದಂಥ ಮಂತ್ರಿಗಳಿಗೆ ಅಲ್ಲಿ ಹೋದ ಮೇಲೆ ಏನು ಜಾದುವಾಗುತ್ತದೋ ಗೊತ್ತಿಲ್ಲ, ಈ ವಿಷಯದಲ್ಲಿ ಒತ್ತಾಯ ಮಾಡುವುದೇ ಇಲ್ಲ. ವಿಜಯನಗರ ಉಕ್ಕಿನ ಕಾರ್ಖಾನೆ ವಿಷಯದಲ್ಲಾಗಲೀ, ರೈಲ್ವೆ ಲೈನ್ ವಿಷಯದಲ್ಲಾಗಲೀ ಕೇಂದ್ರದ ಮೇಲೆ ಹೆಚ್ಚು ಒತ್ತಡ ತರಬೇಕು. ಮಾನ್ಯ ಸದಸ್ಯರಾದ ರಾಘವೇಂದ್ರ ಅವರು ಏನು ನಿರ್ಣಯ ತಂದಿದ್ದಾರೆ ಅದು ಬಹಳ ಒಳ್ಳೆಯದು. ಆದರೆ ಸರ್ಕಾರದವರೇ ನಿರ್ಣಯ ತರುತ್ತೇವೆಂದು ಹೇಳಿದರೆ ಅವರು ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾವೆಲ್ಲಾ ಒಮ್ಮತದಿಂದ ನಿರ್ಣಯ ಮಾಡಿ ಕಳುಹಿಸೋಣ. ಬರೀ ನಿರ್ಣಯ ಮಾಡಿ ಭಾಷಣ ಮಾಡಿದರೆ ಪ್ರಯೋಜನವಾಗುವುದಿಲ್ಲ. ಕರ್ನಾಟಕ ಬಂದ್, ದೆಹಲಿ ಚಲೋ ಮಾಡುವಂಥ ಮಟ್ಟದಲ್ಲಿ ಒತ್ತಾಯ ತಂದರೆ ಖಂಡಿತ ನಮಗೆ ಉಕ್ಕಿನ ಕಾರ್ಖಾನೆ ಆಗುತ್ತದೆ. ನಾವು ರಾಜಕೀಯ ಭಿನ್ನಾಭಿಪ್ರಾಯವನ್ನು ಮರೆತು ಕರ್ನಾಟಕದ ಜನರ ಹಿತಕ್ಕೆ ದುಡಿಯಬೇಕು ಎಂದು ಹೇಳಿ ಈ ನಿರ್ಣಯಕ್ಕೆ ಬೆಂಬಲ ಸೂಚಿಸುತ್ತಿದ್ದೇನೆ.

ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) — ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡುವ ಬಗ್ಗೆ ತಂದಿರುವ ನಿರ್ಣಯಕ್ಕೆ ನನ್ನ ಬೆಂಬಲ ಇದೆ. ಮಾನ್ಯ ಮೊಯಿಲಿಯಪ್ಪರು ಚೆನ್ನಾಗಿ ಹೇಳಿದರು, ಇದು ಕನ್ನಡಿಗರ ಜೀವಾಳದ ಪ್ರಶ್ನೆ ಎಂದು. ಆದರೆ ಈಗ ಈ ವಿಚಾರ ಜೀವ ತೆಗೆಯುವ ಪರಿಸ್ಥಿತಿಯಾಗಿ ಪರಿಣಮಿಸಿದೆ. ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡುವ ಕಾರ್ಯ ತೀವ್ರ ವಿಳಂಬವಾಗಿದೆ. ನಾನು ಈ ಬಗ್ಗೆ ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ವಿಶ್ಲೇಷಣೆ ಮಾಡುವುದಕ್ಕೆ ಹೋದರೆ ಬಾಜಿ ಚಿತಕ್ಕೆ ಹಿಡೆಯಲ್ಲಿಲ್ಲ ಎಂದು ಹೇಳಿದ ಹಾಗಾಗುತ್ತದೆ. ವಿಧಾನಸೌಧ ಎಂದರೆ ಇದೊಂದು ರಾಜಕೀಯ ಮನೆ ಮಾತ್ರವಲ್ಲ, ರಾಜ್ಯದ ಆರ್ಥಿಕ, ಸಾಮಾಜಿಕ ಹಿತಚಿಂತನೆ ಮಾಡುವ ಮನೆ ಕೂಡ ಹೌದು. ಈ ವಿಷಯದಲ್ಲಿ ರಾಜಕೀಯ ಒತ್ತಡವನ್ನು ಕೇಂದ್ರದ ಮೇಲೆ ತರಬೇಕಾಗುತ್ತದೆ. ರಾಜಕೀಯ ಕೂಡ ಒಂದು ಶಕ್ತಿ. ಆದರೆ ಬರೀ ರಾಜಕೀಯ ಮಾಡಬಾರದು. ರಾಜಕೀಯ ಮಾಡಬಾರದು ಎಂದರೆ ''ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣಸಂಕಟ'' ಎನ್ನುವಂತೆ ಮಾಡಬಾರದು. ರಾಜಕೀಯ ಶಕ್ತಿ ಎಂದರೆ ಶಾಸಕ ಶಕ್ತಿ. ಈ ಶಾಸಕ ಶಕ್ತಿಯೇ ರಾಜಕೀಯ ಶಕ್ತಿ. ಈ ರಾಜಕೀಯ ಶಕ್ತಿಯನ್ನು ಉಪಯೋಗ ಮಾಡಿಕೊಂಡು ಕೇಂದ್ರದ ಮೇಲೆ ಒತ್ತಡವನ್ನು

ತರಬೇಕು. ಇದು ಎಲ್ಲರ ಜೀವಾಳದ ಪ್ರಶ್ನೆಯಾಗಿರುವುದರಿಂದ ಪ್ರತಿಪ್ಪೆಯು ಪ್ರಶ್ನೆಯನ್ನಾಗಿ ಮಾಡ ಬಾರದು. ಆದಷ್ಟು ಜಾಗ್ರತೆ ಈ ವಿಷಯದಲ್ಲಿ ಇತ್ಯರ್ಥ ಮಾಡಬೇಕು ಎಂದು ಹೇಳಿ ಈ ನಿರ್ಣಯಕ್ಕೆ ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. CHAIRMAN.—The discussion will continue on the next non-official day. Now the House stands adjourned to meet again at 11.00 A.M. on Monday, the 23rd, January, 1984.

(The House adjourned at Fiftyfive minutes past Four of the Clock to meet again at Eleven of the Clock on 23rd January, 1984.)